**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 10 ಸಂ. 3 ಮಾರ್ಚ್ 2013 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಶ್ಯಾಮಲಾದೇವಿ**
**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)**

ನಾನು ಇತರರೊಡನೆ ಹಂಚಿಕೊಳ್ಳಬಹುದಾದಂಥ ಅನುಭವಗಳಲ್ಲೊಂದು ಕೆಲವು ವಾರಗಳ ಹಿಂದೆ ಸಂಭವಿಸಿತು. ನಾನು ಮೊನಚಾದ ತುದಿಗಳನ್ನು ಹೊಂದಿದ್ದ ಒಂದು ಬೃಹದಾಕಾರದ ಡಿಸ್ಕನ್ನು ನೋಡಿದೆ. ಅದರ ಕೇಂದ್ರ ಶಂಬಲದಲ್ಲಿತ್ತು. ಅದು ಸುತ್ತಮುತ್ತ ವಿಸ್ತರಿಸಲು ಪ್ರಾರಂಭಿಸಿತು. ಆ ಕೂಡಲೇ ನಾನು ಅದರಲ್ಲಿ ಅಗಾಧವಾದ ಹೊಂಬಣ್ಣದಿಂದ ಕೂಡಿದ ಹಳದಿ ಜ್ವಾಲೆಯನ್ನು ಕಂಡೆನು. ಅದು ಈ ಪ್ರಪಂಚವನ್ನು ಶುದ್ಧಗೊಳಿಸಲು ಬಿಡುಗಡೆಮಾಡಲಾದ ಒಂದು ವಿಶೇಷ ಚೈತನ್ಯವಾದ ಪ್ರಳಯಾಗ್ನಿ ಎಂದು ನನಗೆ ಹೇಗೋ ತಿಳಿಯಿತು. ಅದರ ಬಗ್ಗೆ ನನ್ನ ನೆನಪಿನಲ್ಲಿ ಉಳಿದಿರುವ ಕಡೇ ಚಿತ್ರಣವೆಂದರೆ, ಸ್ವಲ್ಪ ಸಮಯದ ನಂತರ ಅದು ವಿಸ್ತರಿಸುವುದು ನಿಂತಿತು, ಆದರೆ ಜ್ವಾಲೆ ಬೆಳೆಯುತ್ತಿತ್ತು.

ಬಹಳ ಅಪರೂಪದ ಪ್ರಶ್ನೆಯೊಂದನ್ನು ಒಬ್ಬ ಸಾಧಕರು ಕೇಳಿದರು. ಋಷಿಗಳು, ಪರಬ್ರಹ್ಮಲೋಕ, ಶ್ರೀಕೃಷ್ಣ ಮತ್ತು ಹಿಂದೂ ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ನಾವು ಮಾತನಾಡುತ್ತೇವೆ. ಕ್ರಿಶ್ಚಿಯನ್ನರು, ಮುಸ್ಲಿಮರು ಮತ್ತಿತರರನ್ನು ನಾವು ದೂರ ಇಟ್ಟಂತಾಗುವುದಿಲ್ಲವೇ? ನಾವು ಜಾತ್ಯಾತೀತ ಮನೋಧರ್ಮದವರೇ?

ರಾಜಕೀಯವಾಗಿ 'ಜಾತ್ಯಾತೀತ' ಪದ ಬಹಳಷ್ಟು ದುರುಪಯೋಗಕ್ಕೊಳಗಾಗಿದೆ. ಸಂದೇಹವನ್ನು ತಪ್ಪಿಸಲು ಇದನ್ನು ಆಧ್ಯಾತ್ಮಿಕ ನೆಲೆಗಟ್ಟಿನಿಂದ ದೂರ ಇಡೋಣ. ಧ್ಯಾನ ಧಾರ್ಮಿಕವಲ್ಲದ, ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ಇನ್ನೂ ಹೆಚ್ಚು ಸ್ಪಷ್ಟವಾಗಿ ಹೇಳಬೇಕೆಂದರೆ, ಅದು ಎಲ್ಲ ಧರ್ಮಗಳಿಗೂ ಮಿಗಿಲಾದುದು. ಋಷಿಗಳು ಅಸ್ತಿತ್ವದಲ್ಲಿದ್ದಾರೆ. ಅವರನ್ನು ಆಧ್ಯಾತ್ಮಿಕ ಮಾಸ್ಟರ್‌ಗಳು ಎಂದು ಕರೆಯಬಹುದು. ಶ್ರೀಕೃಷ್ಣ ಚಾರಿತ್ರಿಕ ಪುರುಷ ಮತ್ತು ಗೀತೆಯ ಸಂದೇಶ ವಿಶ್ವಾತ್ಮಕವಾದುದು. ಇದರಲ್ಲಿ ಯಾವುದೇ ಧಾರ್ಮಿಕ ಭಾವಾತಿರೇಕವಿಲ್ಲ. ನಾವು ಈ ಹೆಸರುಗಳನ್ನು ಉಪಯೋಗಿಸಬಾರದೆಂದರೆ, ನಾವು ಸ್ವಸ್ವರೂಪವನ್ನು ಅವಿತಿಡುತ್ತೇವೆ. ಜಾತ್ಯಾತೀತದ ವಿಕೃತ ಕಲ್ಪನೆಗೆ ಸರಿಹೊಂದುವಂತೆ ನಾವು X,Y ಮತ್ತು Z ಬಳಸಬೇಕು.

ಒಬ್ಬ ವ್ಯಕ್ತಿ ತನ್ನ ಗುರುತನ್ನು ಕಳೆದುಕೊಳ್ಳಬೇಕಾಗಿಲ್ಲ. ಸಂದೇಶ ಮುಖ್ಯ. ಅದು ವಿಶ್ವಾತ್ಮಕವಾಗಿರಬೇಕು. ಮಾರ್ಗ ಎಲ್ಲರಿಗೂ ತೆರೆದಿರಬೇಕು. ಎಲ್ಲ ಮಾರ್ಗಗಳನ್ನು ಗೌರವಿಸಬೇಕು ಏಕೆಂದರೆ ಎಲ್ಲ ಮಾರ್ಗಗಳೂ ಸತ್ಯವಾದವು. ರಾಜಕೀಯ ವಿಭಜಿಸುತ್ತದೆ; ನಕಾರಾತ್ಮಕತೆಯನ್ನು ಉತ್ಪತ್ತಿ ಮಾಡುತ್ತದೆ. ಆಧ್ಯಾತ್ಮಿಕತೆಯಲ್ಲಿ ಸಾಮರಸ್ಯ ಮತ್ತು ಒಗ್ಗೂಡುವಿಕೆಗಳಿವೆ.

ಸಾಧನೆಯನ್ನು ಕೈಗೆತ್ತಿಕೊಂಡು ಜೀವನದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಬಯಸಿದ್ದ ಒಬ್ಬ ಯುವಕನ ಪತ್ರದಿಂದ ನನ್ನ ಹೃದಯ ತುಂಬಿಬಂತು. ಆತ ನನ್ನನ್ನು ಭೇಟಿ ಮಾಡಲು ಬಯಸಿದ್ದ. ಆದರೆ ಅವನ ಮುಂದಿನ ಪತ್ರ ನನ್ನನ್ನು ವ್ಯಸನಗೊಳಿಸಿತು. ಆತ ಒಬ್ಬ ಅವಧೂತನೊಂದಿಗೆ ಹಿಮಾಲಯಕ್ಕೆ ಹೊರಟುಹೋಗಿದ್ದ. ಆತ ಬರೆದಿದ್ದ, "ಇಂದಿನಿಂದ ನನಗೆ ಯಾವುದೇ ವಿಳಾಸವಿಲ್ಲ."

ದೇವರನ್ನು ತಲುಪಲು ನಾವು ಮನೆ, ಊರುಗಳನ್ನು ತ್ಯಜಿಸಿ ಓಡಿಹೋಗಬೇಕೇ? ಅವನನ್ನು ನಾವು ಇಲ್ಲೇ ಕಂಡುಕೊಳ್ಳಲಾಗುವುದಿಲ್ಲವೇ? ಸಾಧನೆ ಜೀವನದಿಂದ ಪ್ರತ್ಯೇಕವಾಗಿದೆಯೇ? ಹಿಮಾಲಯದೊಂದಿಗಿನ ರೊಮಾನ್ಸ್‌ನಿಂದ ಗುರಿಯನ್ನು ಸಾಧಿಸಲಾಗುವುದೇ? ಸಿದ್ಧಿಗಳು ಮತ್ತು ಪಂಥಗಳೊಂದಿಗೆ ಕೊನೆಗೊಳ್ಳುವ ಸಾಧ್ಯತೆ ಇಲ್ಲವೇ? ಆ ಯುವಕ ಈ ನಿರ್ಧಾರಕ್ಕೆ ಧುಮುಕುವ ಮುನ್ನ ನಾನು ಅವನನ್ನು ಭೇಟಿಮಾಡಲು ಸಾಧ್ಯವಾಗಿದ್ದರೆ ಚೆನ್ನಾಗಿತ್ತು ಎಂದೆನಿಸುತ್ತದೆ.

ನನ್ನಲ್ಲಿ ಯಾವುದೇ ಪವಾಡ ಮಾಡುವ ಶಕ್ತಿಗಳಿಲ್ಲ ಮತ್ತು ನಾನು ಎಲ್ಲ ಗುರುತರ ಸಮಸ್ಯೆಗಳಿಗೆ ದಿಢೀರನೆ ಪರಿಹಾರ ತಂದುಕೊಡಲಾಗುವುದಿಲ್ಲ ಎಂಬುದರ ಬಗ್ಗೆ ಇತರರಿಗೆ ಮನದಟ್ಟು ಮಾಡಿಸುವುದು ಕಷ್ಟ. ನಾನು ಋಷಿಗಳಿಂದ ಅನುಗ್ರಹಿಸಲ್ಪಟ್ಟ ಹಿರಿಯ ಸಾಧಕ ಅಷ್ಟೆ. ಋಷಿಗಳು ಎಲ್ಲವನ್ನೂ ಗಮನಿಸುತ್ತಾರೆ ಮತ್ತು ಅವರಿಗೆ ಎಲ್ಲವೂ ಗೊತ್ತಿದೆ. ಋಷಿಗಳು ಎಲ್ಲರಿಗೂ ಸಹಾಯ ಮಾಡುತ್ತಾರೆ. ನಮ್ಮ ಎಲ್ಲ ಸಮಸ್ಯೆಗಳು ಹಠಾತ್ತಾಗಿ ನಿವಾರಣೆಯಾಗದಿರಬಹುದು ಏಕೆಂದರೆ ಋಷಿಗಳು ಮತ್ತು ದೇವರೂ ಸಹ ಕರ್ಮದ ನಿಯಮಗಳನ್ನು ಮೀರುವುದಿಲ್ಲ. ಆದರೆ ಅವರು ನಮ್ಮ ಎಲ್ಲ ಸಮಸ್ಯೆಗಳ ಮೂಲ ಕಾರಣ ತೆಗೆದುಹಾಕುವ ಆಧ್ಯಾತ್ಮಿಕ ಮಾರ್ಗವನ್ನು ನಮಗೆ ತೋರಿಸುತ್ತಾರೆ. ಯಾವುದೇ ಸಮಸ್ಯೆಯನ್ನು ಎದುರಿಸಲು ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳಲು ನಮಗೆ ಶಕ್ತಿ ನೀಡುತ್ತಾರೆ. ಆಧ್ಯಾತ್ಮಿಕ ಮಾರ್ಗ ಒಂದೇ ಏಕೈಕ ಮಾರ್ಗ ಏಕೆಂದರೆ ಬೇರೆ ಯಾವುದೇ ಮಾರ್ಗ ಒಂದು ಸನ್ನಿವೇಶವನ್ನು ಮುಂದೂಡುತ್ತದೆ ಮತ್ತು ಹುಸಿ ಭರವಸೆಗಳನ್ನು ಮೂಡಿಸುತ್ತದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/–**
**ಡಿಡಿಯನ್ನು**
**‘Manasa Light Age Foundation’**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಅಮರ ಜಯಂತಿಯ ದಿನವಾದ ಫೆಬ್ರವರಿ 1, 2013 ರಂದು ವಿಶ್ವ ಚಾನಲ್ಸ್ ದಿನವನ್ನು ಆಚರಿಸಲಾಯಿತು. 8.85 ಲಕ್ಷಕ್ಕೂ ಮೇಲ್ಪಟ್ಟು ಮಕ್ಕಳು 1868 ಶಾಲೆಗಳಲ್ಲಿ ಬೆಳಕನ್ನು ಚಾನಲ್ ಮಾಡಿದರು. 210 ಸಮರ್ಪಿಸಿಕೊಂಡ ವಾಲಂಟಿಯರ್‌ಗಳು ಈ ಸೆಷನ್‌ಗಳನ್ನು ನಡೆಸಿಕೊಟ್ಟರು.

### ಸುದ್ದಿ–ಸೂಚನೆ

- 3–2–2013 ರಂದು ತಪೋನಗರದಲ್ಲಿ ನಡೆದ ಅಮರ ಜಯಂತಿ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.
- 3–2–2013 ರಂದು ತಪೋನಗರದಲ್ಲಿ ನಡೆದ ಅಮರ ಜಯಂತಿ ಕಾರ್ಯಕ್ರಮದ ಸಂದರ್ಭದಲ್ಲಿ– “Quotes from the Rishis Vol.2” ಪುಸ್ತಕ, ಗುರೂಜಿಯುವರ ಅನೌಪಚಾರಿಕ ಮಾತುಕತೆಯ ಕೆಲವು ವೀಡಿಯೋಗಳನ್ನೊಳಗೊಂಡ DVD ಮತ್ತು “Descent of Soul” ಪುಸ್ತಕದ ಆಡಿಯೋ CDಯನ್ನು ಬಿಡುಗಡೆ ಮಾಡಲಾಯಿತು.
- DVDಗಳ ಚಂದಾದಾರರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವ ಕಾರಣ ನಾವು ಸಾಧಕರಿಗೆ ಕಳುಹಿಸುತ್ತಿರುವ DVDಗಳನ್ನು ರದ್ದುಗೊಳಿಸಲು ತೀರ್ಮಾನಿಸಿದ್ದೇವೆ.

### ಕಾಮದಹನ ತಂತ್ರ

ಮಾರ್ಚ್ 26ನೇ ಮಂಗಳವಾರದಂದು ಚಂದ್ರೋದಯದ ಸಮಯದಲ್ಲಿ, ನಿಮ್ಮ ಮುಂದೆ ಒಂದು ಹೋಮಕುಂಡವಿದೆ ಎಂದು ಊಹಿಸಿಕೊಳ್ಳಿ. ಅಗ್ನಿದೇವನನ್ನು ಆವಾಹಿಸಿ – ಒಂದು ಬಾರಿ ‘ಓಂ ಅಗ್ನಿದೇವಾಯ ನಮಃ’ ಎಂಬ ಮಂತ್ರವನ್ನು ಹೇಳಿ ಮತ್ತು ಹೋಮಕುಂಡದಲ್ಲಿ ಬೆಂಕಿಯನ್ನು ಊಹಿಸಿಕೊಳ್ಳಿ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಊಹಿಸಿಕೊಳ್ಳಿ. ಕಾಮವು ನಿಮ್ಮಿಂದ ಒಂದು ಹೊಗೆಭರಿತ ಅಥವಾ ಕಪ್ಪು ಚೆಂಡಿನ ರೂಪದಲ್ಲಿ ಹೊರಬರುತ್ತಿದೆ ಎಂದು ಒಂದು ಅಥವಾ ಎರಡು ನಿಮಿಷಗಳ ಕಾಲ ಭಾವಿಸಿಕೊಂಡು, ಅದನ್ನು ನಿಮ್ಮ ಕೈಗಳಲ್ಲಿ ಹಿಡಿದು ಹೋಮಾಗ್ನಿಯಲ್ಲಿ ಹಾಕಿ. ಇದೇ ರೀತಿಯಾಗಿ ಉಳಿದ ಐದನ್ನೂ ಪುನರಾವರ್ತಿಸಿ. ನಂತರ ಅಗ್ನಿದೇವನಿಗೆ ಕೃತಜ್ಞತೆಯನ್ನು ಸಲ್ಲಿಸಿ. ನಂತರ ಸ್ವಲ್ಪಸಮಯದವರೆಗೆ ನಿಮ್ಮಲ್ಲಿ ಬೆಳಕನ್ನು ಅನುಭವಿಸಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಮಂಗಳ | ಕೃಷ್ಣ ಅಷ್ಟಮಿ |
| 10 | ಭಾನು | ಮಹಾ ಶಿವರಾತ್ರಿ |
| 11 | ಸೋಮ | ಅಮಾವಾಸ್ಯೆ |
| 20 | ಬುಧ | ಶುಕ್ಲ ಅಷ್ಟಮಿ |
| 22 | ಶುಕ್ರ | ಶುಕ್ಲ ದಶಮಿ |
| 26 | ಮಂಗಳ | ಕಾಮದಹನ |
| 27 | ಬುಧ | ಪೂರ್ಣಿಮಾ |
| 29 | ಶುಕ್ರ | ಗುಡ್ ಫ್ರೈಡೆ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11–12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12–1 |
| 10–03–13 | ಮಹಾ ಶಿವರಾತ್ರಿ ವಿಶೇಷ ಧ್ಯಾನ: ಮಧ್ಯಾಹ್ನ 12–1<br>ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 17–03–13 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 29–03–13 | ಗುಡ್‌ಫ್ರೈಡೆ ವಿಶೇಷ ಧ್ಯಾನ: ಮಧ್ಯಾಹ್ನ 12–1 |
| 31–03–13 | ಅಖಂಡ ಧ್ಯಾನ: ಮಧ್ಯಾಹ್ನ 11–1 |

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.

## ವಿಶ್ವ ಸಂಚಲನ ದಿನ

**ಮನೋಜ್ ಕುಮಾರ್ ಚೋಪ್ರ; ಅನು: ವರ್ಷಾ ದೀಪಕ್**

ಪ್ರತಿ ವರ್ಷ ಫೆಬ್ರವರಿ 1 ರಂದು ಆಚರಿಸುವ 'ವಿಶ್ವ ಸಂಚಲನ ದಿನ'ಕ್ಕಾಗಿ ಲೈಟ್ ಚಾನಲ್ ಕಾರ್ಯಕರ್ತರು ಕಾಯುತ್ತಾರೆ. ಇದು ಈ ಭೂಮಿಯ ಮೇಲೆ ಪ್ರೀತಿ ಮತ್ತು ಶಾಂತಿಯನ್ನು ಹರಡುವ ದಿನವಾಗಿದೆ. ಈ ದಿನ ಮಹರ್ಷಿ ಅಮರರವರ ಜನ್ಮದಿನ ಕೂಡಾ ಆಗಿರುವುದರಿಂದ, ಅದರೊಂದಿಗೆ ನಮ್ಮ ಭಾವನೆಗಳೂ ಸೇರಿವೆ. ಪ್ರತಿ ವರ್ಷ ನಾವು ಅತ್ಯಂತ ಹೆಚ್ಚು ಲೈಟ್ ಚಾನಲ್ ಮಾಡುವ ಮೂಲಕ ಅವರಿಗೆ ವಿಶಿಷ್ಟ ರೀತಿಯಲ್ಲಿ ಉಡುಗೊರೆ ನೀಡಬಯಸುತ್ತೇವೆ.

ಲೈಟ್ ಚಾನಲ್ಸ್ ತಂಡ ಈ ಬೃಹತ್ ಕಾರ್ಯಕ್ರಮಕ್ಕಾಗಿ ಕಳೆದ ತಿಂಗಳಿನಿಂದಲೇ ಸಜ್ಜುಗೊಳ್ಳಲಾರಂಭಿಸಿತ್ತು. ಪ್ರತಿ ವರ್ಷದಂತೆ, ತಂಡಗಳ ಮೀಟಿಂಗ್‌ನೊಂದಿಗೆ ಕಾರ್ಯ ಯೋಜನೆಯು ಆರಂಭಗೊಂಡು, ನಂತರ ಸತತವಾಗಿ ಶಾಲೆಗಳಿಗೆ ಭೇಟಿ ನೀಡಲಾರಂಭಿಸಿದರು. ಕೆಲಸವನ್ನು ಕ್ಷೇತ್ರವ್ಯಾಪಿಯಾಗಿ ಹಂಚಲಾಯಿತು ಮತ್ತು ಪ್ರತಿ ಕಾರ್ಯಕರ್ತರಿಗೂ ಅದರ ಜವಾಬ್ದಾರಿಯನ್ನು ನೀಡಲಾಯಿತು. ಸುಮಾರು 2000 ಶಾಲೆಗಳಿಗೆ ಲೈಟ್ ಚಾನಲ್ ಕಾರ್ಯಕ್ರಮದ ಅನುಮತಿಗಾಗಿ ವೈಯಕ್ತಿಕ ಭೇಟಿ ನೀಡಲಾಯಿತು. ಎಂದಿನಂತೆಯೇ ಶಾಲೆಗಳಲ್ಲಿ ಉತ್ತಮ ರೀತಿಯಲ್ಲಿ ಇದನ್ನು ಸ್ವಾಗತಿಸಿದರು. ಅನೇಕ ಶಾಲೆಗಳಲ್ಲಿ ಪರೀಕ್ಷೆಗಳು ಹಾಗೂ ವಾರ್ಷಿಕ ದಿನಾಚರಣೆಯಿದ್ದರೂ ಕೂಡ ಅನೇಕರು ಸ್ವಯಂ ಪ್ರೇರಣೆಯಿಂದ, ತಾವೇ 3 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಮಾಡಿಸಲು ಒಪ್ಪಿದರು. ಸುಮಾರು 1000 ಶಾಲೆಗಳಲ್ಲಿ ತಮ್ಮಷ್ಟಕ್ಕೆ ತಾವೇ ಲೈಟ್ ಚಾನಲಿಂಗ್ ಮಾಡುವುದರ ಮುಖಾಂತರ ಮೌನವಾಗಿ ಶಾಂತಿಯನ್ನು ಹರಡುವ ನಮ್ಮ ಈ ವಿಶೇಷ ಕಾರ್ಯದಲ್ಲಿ ಕೈಜೋಡಿಸಿದರು. ಇದು, ನಮ್ಮ ಕಾರ್ಯಕರ್ತರೆಡೆಗಿನ ಅವರ ಪ್ರೀತಿ ಮತ್ತು ಗೌರವವನ್ನು ಹಾಗೂ ನಮ್ಮ ಕನಸಿನಲ್ಲಿ ಅವರಿಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ.

ಇದಕ್ಕಾಗಿ ಸುಮಾರು 210 ಕಾರ್ಯಕರ್ತರು ಅತ್ಯಂತ ಪರಿಶ್ರಮ ಪಟ್ಟಿದ್ದಾರೆ ಹಾಗೂ ಅನೇಕರು ನಿದ್ರೆ ಇಲ್ಲದ ರಾತ್ರಿಗಳನ್ನು ಕಳೆದಿದ್ದಾರೆ. ಆದರೂ, ಈ ಕೆಲಸದ ಮೇಲಿನ ಅವರ ಪ್ರೀತಿ ಮತ್ತು ಸಮರ್ಪಣಾಭಾವದಿಂದಾಗಿ, ಇದು ನಿರಂತರವಾಗಿ ನಡೆಯುವಂತೆ ಮಾಡಿತು. ಅವರು ಬೆಳಕಿನಲ್ಲಿ ಮತ್ತು ಬೆಳಕಿನ ವಿಶ್ವ ಸಂಚಲನದಲ್ಲಿ ನಂಬಿಕೆಯನ್ನು ಇಟ್ಟಿದ್ದಾರೆ. ಅವರು ತಮ್ಮ ತಂಡದೊಂದಿಗೆ ಹೊಂದಿದ್ದ ಏಕತೆ ಮತ್ತು ನಿಖರವಾದ ಯೋಜನೆಯು ಈ ಕಾರ್ಯಕ್ರಮದ ಸಫಲತೆಗೆ ಕಾರಣವಾಯಿತು. ಅವರು ಪ್ರತಿಯೊಬ್ಬರೆಡೆಗೆ ತಮ್ಮಲ್ಲಿ ಹೊಂದಿರುವ ಪ್ರೀತಿಯೇ ತಂಡದ ಶಕ್ತಿಯಾಗಿದೆ. ಅಂತಹ ಬಲವಾದ ಭಾವನೆಗಳಿಂದ ನೀವು ಕೆಲಸ ಮಾಡಿದಾಗ ಸಮಸ್ತ ವಿಶ್ವ ನಿಮಗೆ ಸಹಕರಿಸುತ್ತದೆ. ಅಂತಹ ಆತ್ಮಗಳನ್ನು ದೇವರು ಪ್ರೀತಿಸುತ್ತಾನೆ ಹಾಗೂ ಅದ್ಭುತವಾದ ಅನುಭವಗಳ ಮತ್ತು ಪವಾಡಗಳ ರೂಪದಲ್ಲಿ ಅವರಿಗೆ ಪ್ರತಿಫಲ ನೀಡುತ್ತಾನೆ. ಅವರಿಗೆ ಹೆಜ್ಜೆಹೆಜ್ಜೆಗೂ ಸಹಾಯ ದೊರೆಯುತ್ತಿತ್ತು.

ಫೆಬ್ರವರಿ 1 ರ ಆ ದಿನ, ನಮ್ಮ ಅನೇಕ ಕಾರ್ಯಕರ್ತರು ತಮ್ಮ ಕೆಲಸವನ್ನು ಬೆಳಿಗ್ಗೆ 6ಗಂಟೆಗೇ ಆರಂಭಿಸಿ, ಸಂಜೆಯವರೆಗೆ ಮುಂದುವರೆಸಿದರು. ನಮ್ಮ ಆಸ್ಟ್ರಲ್ ಮಾಸ್ಟರ್‌ಗಳ ಮತ್ತು ಬೆಳಕಿನ ಅನುಗ್ರಹದಿಂದಾಗಿ ಎಲ್ಲವೂ ಸುಲಲಿತವಾಗಿ ನಡೆಯಿತು. ಅಂದಿನ ಬೃಹತ್ ಯಶಸ್ಸಿನಿಂದಾಗಿ, ಆ ದಿನ ಸಂತೋಷ ಮತ್ತು ತೃಪ್ತಿಯಿಂದ ಕೊನೆಗೊಂಡಿತು.

'ಬೆಳಕಿನ ವಿಶ್ವ ಸಂಚಲನ'ದ ಉದ್ದೇಶ ಪ್ರತಿಯೊಬ್ಬರನ್ನೂ ಹೀಲ್ ಮಾಡುವುದು ಹಾಗೂ ನಕಾರಾತ್ಮಕ ಕಾರ್ಯಗಳಿಂದ ಗಾಯಗೊಂಡಿರುವ ವಿಶ್ವವನ್ನು ಹೀಲ್ ಮಾಡುವುದು ಆಗಿದೆ. ಹಿಂಸೆ, ಅ–ಪ್ರೀತಿ, ಅನ್ಯಾಯ, ಮುಂತಾದವುಗಳಿಂದ ನಮ್ಮ ಭೂಮಿ ಮುಕ್ತವಾದಾಗ ಅತ್ಯಂತ ಸುಂದರವಾದ ಕಾಲವೊಂದು ಆರಂಭವಾಗುತ್ತದೆ.

ಲಕ್ಷಾಂತರ ಜನರು ಪರಿಶುದ್ಧವಾದ ಉದ್ದೇಶದಿಂದ ಮಾಡಿರುವ ಲೈಟ್ ಚಾನಲಿಂಗ್ ಖಂಡಿತವಾಗಿಯೂ ಈ ಪ್ರಪಂಚದ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡುತ್ತದೆ. ಈ ಚಾನಲಿಂಗ್, ಪ್ರಪಂಚಕ್ಕೊಂದು ಹೊಸ ಭವಿಷ್ಯವನ್ನು ರೂಪಿಸುತ್ತಿದೆ. ಬೆಳಕಿನಿಂದ ಆರಂಭಗೊಂಡ ಈ ಕ್ರಾಂತಿ, ಯಾವಾಗಲೂ ತನ್ನ ಗುರಿಯನ್ನು ಸಾಧಿಸುತ್ತದೆ.

ಬೆಳಕು ಪ್ರಪಂಚದ ಪ್ರತಿಕ್ರಿಯೆಗಾಗಿ ಕಾಯುತ್ತಿದೆ. ನಾವೆಲ್ಲರೂ ಈ ಕ್ರಾಂತಿಯಲ್ಲಿ ಭಾಗವಹಿಸೋಣ ಮತ್ತು ಹೊಸಯುಗದ ಕನಸನ್ನು ನನಸಾಗಿಸುವಲ್ಲಿ ಒಟ್ಟಿಗೆ ಕೆಲಸ ಮಾಡೋಣ. ■

### ಲೈಟ್ ಚಾನಲ್ಸ್
ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

09-02-2003

ಋಷಿಗಳು ಲಕ್ಷಾಂತರ ವರ್ಷಗಳ ಹಿಂದೆ ನಮಗೆ ಧ್ಯಾನವನ್ನು ಕೊಟ್ಟಿದ್ದಾರೆ. ಧ್ಯಾನದಲ್ಲಿರುವ ನಿಯಮವೆಂದರೆ, ನಮ್ಮ ಮೂರು ಅಸ್ತಿತ್ವಗಳಾದ ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಮೌನಗೊಳಿಸುವುದು. ಆಸನವನ್ನು ಅಭ್ಯಾಸ ಮಾಡುವುದರಿಂದ ದೇಹವನ್ನು ಮೌನಗೊಳಿಸುತ್ತೇವೆ, ಒಂದು ಮಂತ್ರವನ್ನು ಪುನರಾವರ್ತಿಸುವುದರಿಂದ ಮನಸ್ಸನ್ನು ಮೌನಗೊಳಿಸಲು ಪ್ರಯತ್ನಿಸುತ್ತೇವೆ ಮತ್ತು ಧಾರಣದಿಂದ ಬುದ್ಧಿಯನ್ನು ಮೌನಗೊಳಿಸುತ್ತೇವೆ. ಆದ್ದರಿಂದ ಆಸನ, ಮಂತ್ರ ಮತ್ತು ಧಾರಣಗಳು ಮುಖ್ಯ. ನಮ್ಮ ಶರೀರ ವ್ಯವಸ್ಥೆಯನ್ನು ಮೌನಗೊಳಿಸುವ ಧ್ಯಾನದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು, ಧ್ಯಾನದಲ್ಲಿ ಈ ಮೂರೂ ಅಸ್ತಿತ್ವಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು.

ಬ್ರಹ್ಮಾಂಡದಲ್ಲಿ ಪ್ರಯಾಣಿಸುವ ಬಗ್ಗೆ ನಾವು ಮಾತನಾಡಿದ್ದೇವೆ. ನಾವು ದೈವೀಬ್ರಹ್ಮಾಂಡದಲ್ಲಿ ಕೂಡಾ ಪ್ರಯಾಣಿಸಬಹುದು. ಇದಕ್ಕೆ ಮಾರ್ಗದರ್ಶನ ಮತ್ತು ಬಹಳಷ್ಟು ಸಿದ್ಧತೆಯ ಅಗತ್ಯವಿದೆ. ಇಲ್ಲಿ ಕೂಡಾ ಪ್ರಯಾಣದ ಬಗ್ಗೆ ಋಷಿಗಳಿಂದ ಮಾರ್ಗದರ್ಶನ ಅತ್ಯಗತ್ಯ, ಇಲ್ಲವಾದರೆ ನಕಾರಾತ್ಮಕ ಜನಗಳು, ಪ್ರಪಂಚಗಳು ಮತ್ತು ಚೈತನ್ಯಗಳೊಂದಿಗೆ ನಾವು ಕಳೆದು ಹೋಗುತ್ತೇವೆ. ಋಷಿಗಳು ನಮ್ಮನ್ನು ಕ್ಷೇಮವಾಗಿ ಕರೆದೊಯ್ಯುತ್ತಾರೆ. ನಾವು ಇಡೀ ಬ್ರಹ್ಮಾಂಡವನ್ನು ನಮ್ಮ ಸೂಕ್ಷ್ಮಶರೀರದಿಂದ ಪ್ರಯಾಣಿಸಬಹುದು, ಆದರೆ ನಾವು ಮಾನಸಿಕ ನೆಲೆಯನ್ನು ದಾಟಿ ಬುದ್ಧಿಯ ನೆಲೆಯನ್ನು ಪ್ರವೇಶಿಸಬೇಕಾದರೆ ಮಾನಸಿಕ ಶರೀರವನ್ನು ಕೈಬಿಡಬೇಕು. ಅಲ್ಲಿಂದಾಚೆ ಹೋಗಬೇಕಾದರೆ ನಾವು ಬೌದ್ಧಿಕ ದೇಹವನ್ನು ಕೂಡಾ ಕೈಬಿಡಬೇಕು. ಆಗ ನಾವು ಆತ್ಮವನ್ನು ಒಳಗೊಂಡಿರುವ ಆಧ್ಯಾತ್ಮಿಕ ಶರೀರವನ್ನು ಮಾತ್ರ ಹೊಂದಿರುತ್ತೇವೆ. ಆತ್ಮದ ಜೊತೆ ಇರುವ ಆಧ್ಯಾತ್ಮಿಕ ಶರೀರ ಎಂದರೆ ಕಾರಣಿಕ ಶರೀರ. ನಾವು ಬ್ರಹ್ಮಾಂಡ ಮತ್ತು ದೈವೀಬ್ರಹ್ಮಾಂಡಗಳಲ್ಲಿ ಪ್ರಯಾಣಿಸುತ್ತೇವೆ. ದೈವೀಬ್ರಹ್ಮಾಂಡದಿಂದ ಆಚೆಗಿರುವ ನಮ್ಮ ಮನೆಗೆ ಕೂಡ ನಾವು ಪ್ರಯಾಣಿಸಬಹುದು. ನಾವು ದೈವೀಬ್ರಹ್ಮಾಂಡದಾಚೆ ಹೋದಂತೆ ಈ ಕಾರಣಿಕ ಶರೀರವನ್ನು ಕೂಡಾ ಬಿಟ್ಟುಕೊಡುತ್ತೇವೆ. ಇದೇ ಶರಣಾಗತಿ. ನಾವು ಎಲ್ಲವನ್ನು ಬಿಟ್ಟು ಶರಣಾದಾಗ, ನಾವು ದೇವರನ್ನು ಪ್ರವೇಶಿಸಬಹುದು. ನಾವು ಜೀವಂತವಾಗಿದ್ದಾಗ ಕೂಡಾ, ಎಲ್ಲ ಶಾರೀರಿಕ ಅಸ್ತಿತ್ವಗಳೂ ನಮ್ಮೊಳಗೆ ಇದ್ದಾಗ ಕೂಡಾ ಶರಣಾಗತಿ ಸಾಧ್ಯ. ಶರಣಾಗತಿ ಹೇಗೆ ಉಂಟಾಗುತ್ತದೆ? ನಾವು ಮನಸ್ಸನ್ನು ಮೌನಗೊಳಿಸುತ್ತೇವೆ, ಎಲ್ಲ ಆಲೋಚನೆಗಳನ್ನು ಮೌನಗೊಳಿಸುತ್ತೇವೆ ಅಂದರೆ ಬುದ್ಧಿಯನ್ನು ಮೌನಗೊಳಿಸುತ್ತೇವೆ. ಇಡೀ ಶರೀರ ವ್ಯವಸ್ಥೆಯನ್ನು ಮೌನಗೊಳಿಸಿ, ಆತ್ಮ ದೇವರೊಂದಿಗೆ ಒಂದು ರೀತಿಯ ಸಂಯೋಗಕ್ಕೆ ಪ್ರವೇಶಿಸುವಂತೆ ಮಾಡುತ್ತೇವೆ. ಆದ್ದರಿಂದ ಧ್ಯಾನಗಳು ಬಹಳ ಮುಖ್ಯ. ಭೌತಿಕ ಶರೀರವನ್ನು 'ಸ್ಥೂಲ ಶರೀರ', ಸೂಕ್ಷ್ಮದೇಹವನ್ನು 'ಸೂಕ್ಷ್ಮ ಶರೀರ' ಎಂದು ಮತ್ತು ಇನ್ನು ಮುಂದೆ ಕಾರಣಿಕ ಶರೀರವನ್ನು 'ಅತಿಸೂಕ್ಷ್ಮ ಶರೀರ' ಎಂದು ಕರೆಯಲಾಗುವುದು.

ಅಮರರವರು 'ರಥಸಪ್ತಮಿ'ಯನ್ನು ಸೂರ್ಯನಾರಾಯಣನ ಜನ್ಮದಿನ ಎಂದು ವಿವರಿಸಿದ್ದರು. ಲಕ್ಷಾಂತರ ವರ್ಷಗಳ ಹಿಂದೆ ಈ ಪ್ರಪಂಚ ಮೋಡಗಳಿಂದ ಸುತ್ತುವರಿದಿತ್ತು. ಮನುಷ್ಯ, ಸೂರ್ಯನನ್ನು ಮೊಟ್ಟ ಮೊದಲ ಬಾರಿಗೆ (ಸೂರ್ಯನು ಯಾವಾಗಲೂ ಇದ್ದರೂ ಕೂಡಾ) ನೋಡಿ ಆರಾಧಿಸಲು ಪ್ರಾರಂಭಿಸಿದನು. ಆ ದಿನವನ್ನು 'ರಥಸಪ್ತಮಿ' ಎಂದು ಕರೆಯಲಾಯಿತು. ಈ ದಿನದಂದು ಸೂರ್ಯನಿಂದ ಹೆಚ್ಚಿಗೆ ಚೈತನ್ಯಗಳನ್ನು ನಾವು ಪಡೆಯುತ್ತೇವೆ. 'ಪ್ರಾಣ' ಸೂರ್ಯನಿಂದ ಬರುತ್ತದೆ. ಅದು ಅತ್ಯಂತ ಸೂಕ್ಷ್ಮ ಚೈತನ್ಯ. ಪ್ರಾಣಗಳಲ್ಲಿ ನಾನಾ ವಿಧಗಳಿವೆ. ನಾವು ಧ್ಯಾನ ಮಾಡುವಾಗ ತುಂಬಾ ಸೂಕ್ಷ್ಮವಾಗಿರುವ ಪ್ರಾಣವನ್ನು ಪಡೆಯಬಹುದು. ಒಮ್ಮೆ, ರಥಸಪ್ತಮಿಯಂದು ನನ್ನನ್ನು ನನ್ನ ಗುರುಗಳು ಸೂರ್ಯನ ಬಳಿಗೆ ಕರೆದೊಯ್ದರು. ನಾವು ಸೂರ್ಯನೊಳಗೆ ಪ್ರವೇಶಿಸಿದೆವು. ಅಮರರವರು ನನ್ನನ್ನು ಚಿನ್ನದ ಬೆಳಕು ಹೊಮ್ಮುತ್ತಿದ್ದ ಒಂದು ಸ್ಥಳಕ್ಕೆ ಕರೆದುಕೊಂಡು ಹೋದರು. ಸ್ವಲ್ಪ ದೂರದಿಂದಲೇ ಅವರು, 'ಇದು ಆದಿತ್ಯ ಹೃದಯ' ಎಂದರು. ಅವರು 'ನೀವು ಏನಾದರೂ ಕೆಲಸ ಮಾಡಬೇಕಾದರೆ ಆದಿತ್ಯ ಹೃದಯದಿಂದ ಚೈತನ್ಯಗಳನ್ನು ಸಂಗ್ರಹಿಸಿ ಮತ್ತು ಅವುಗಳನ್ನು ಆ ಕೆಲಸಕ್ಕೆ ಕಳುಹಿಸಿ' ಎಂದು ಹೇಳಿದರು.

ನನ್ನ ಜೀವನದ ಒಂದು ಹೊಸ ಹಂತಕ್ಕೆ ಅಮರರವರು ದೀಕ್ಷೆ ಕೊಟ್ಟರು. 'ಇಂದಿನಿಂದ ನೀವು ಒಬ್ಬ ನಿಜವಾದ ಸನ್ಯಾಸಿ' ಎಂದರು. 'ಈ ನಿಮಿಷದಿಂದ ನನ್ನ ಜೀವನ ಋಷಿಗಳಿಗೆ ಮತ್ತು ಋಷಿ-ಕೆಲಸಕ್ಕಷ್ಟೇ ಮುಡಿಪು' ಎಂದು ಅವರು ಹೇಳಿದರು.

23-02-2003

ನನ್ನ ಗುರುವಿಗೆ ಒಂಬತ್ತು ವರ್ಷವಾಗಿದ್ದಾಗ ಅವರು ಋಷಿಗಳ ಸಂಪರ್ಕಕ್ಕೆ ಬಂದಿದ್ದರು. ಅವರೊಂದಿಗೆ ಹೆಚ್ಚಿನ ಕಾಲ ಕಳೆದು ಅಗಾಧ ಜ್ಞಾನವನ್ನು ನೇರವಾಗಿ ಪಡೆದಿದ್ದರು. ಅವರು ಯಾವುದೇ ಧಾರ್ಮಿಕ ಗ್ರಂಥಗಳನ್ನು ಓದಿರಲಿಲ್ಲ, ಆದರೆ ಅವರು ಯಾವುದೇ ಅಂಶವನ್ನು ಖಚಿತವಾಗಿ ಸವಿಸ್ತಾರವಾಗಿ ವಿವರಿಸುತ್ತಿದ್ದರು. ಈ ಜ್ಞಾನ ವಿಕೃತವಲ್ಲದ್ದು, ಸಂಪೂರ್ಣವಾದದ್ದು; ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ದೊರಕಿವೆ. 1977ರಲ್ಲಿ ನನ್ನ ಗುರುವನ್ನು ಭೇಟಿ ಮಾಡಿದೆ. ಅಂದಿನಿಂದ ಜನರು ನನ್ನನ್ನು ಸಾವಿರಾರು ಪ್ರಶ್ನೆಗಳನ್ನು ಕೇಳಿದ್ದಾರೆ. ಆ ಎಲ್ಲ ಪ್ರಶ್ನೆಗಳಿಗೂ ನಾವು ಉತ್ತರ ಕಂಡುಕೊಂಡೆವು. ಉತ್ತರಗಳೆಲ್ಲವೂ ಸ್ಪಷ್ಟವಾಗಿದ್ದವು. ಇಲ್ಲಿನ ಜ್ಞಾನದಲ್ಲಿ ಕೆಲವು ವಿಷಯಗಳು ಹೊಸದಾಗಿವೆ, ಅವೆಲ್ಲವೂ ಪರಿಶುದ್ಧವಾದ ಜ್ಞಾನ.

ನಾವು ಮಾನವ ಜೀವಿಗಳು. ನಾವು ಭಾವನೆಗಳು, ಭಾವುಕತೆಗಳು, ಇಷ್ಟಾನಿಷ್ಟಗಳನ್ನು ಹೊಂದಿದ್ದೇವೆ. ನಾವು ಕೋಪಗೊಳ್ಳುತ್ತೇವೆ, ಅಸೂಯೆ ಪಡುತ್ತೇವೆ. ಇವೆಲ್ಲಾ ಸಹಜ, ಸ್ವಾಭಾವಿಕವೆಂಬುದನ್ನು ನಾವೆಲ್ಲ ಅರಿಯಬೇಕು. ಇದಕ್ಕಾಗಿ ನಾವು ಚಿಂತಿಸಬಾರದು. ಈ ಮನುಷ್ಯ ಹಂತದಿಂದ ನಾವು ಮೇಲೇರಬೇಕು, ಆದರೆ ನಮ್ಮನ್ನು ನಾವು ದೂಷಿಸಿಕೊಳ್ಳಬಾರದು.

ನಾವು ಒಳಿತು-ಕೆಡುಕುಗಳಿರುವ ನೆಲೆಯಲ್ಲಿ ವಾಸಿಸುತ್ತಿದ್ದೇವೆ ಎಂಬುದನ್ನು ಅರಿಯಬೇಕು. ನಕಾರಾತ್ಮಕ ಮತ್ತು ಕೆಟ್ಟ ಆಲೋಚನೆಗಳು ಸಹಜ. ಪ್ರಾರಂಭದಲ್ಲಿ ನಾವು ನಕಾರಾತ್ಮಕ ಆಲೋಚನೆಗಳನ್ನು ಉಪೇಕ್ಷಿಸಬೇಕು, ನಂತರ ಒಳ್ಳೆಯ ಆಲೋಚನೆಗಳನ್ನು ಕೂಡಾ ಉಪೇಕ್ಷಿಸಬೇಕು. ಆಲೋಚನೆಗಳನ್ನು ಮೀರಿದ ನೆಲೆಗಳನ್ನು ನಾವು ಪ್ರವೇಶಿಸಬೇಕು, ಏಕೆಂದರೆ ಅಲ್ಲಿ ಮಾತ್ರ ದೇವರನ್ನು ಅನುಭವಿಸಬಹುದು.

ನಕಾರಾತ್ಮಕ ಆಲೋಚನೆಗಳು ನೇರವಾಗಿ ನಮಗೆ ತೊಂದರೆ ಉಂಟುಮಾಡುವುದಿಲ್ಲ, ಆದರೆ ನಕಾರ ಚೈತನ್ಯಗಳು ನಮ್ಮ ಶರೀರ ವ್ಯವಸ್ಥೆಯನ್ನು ಪ್ರವೇಶಿಸಿದರೆ ತೊಂದರೆ ಉಂಟುಮಾಡುತ್ತವೆ. ನಾವು ಮಾಡುವ ಧ್ಯಾನದ ಫಲವಾಗಿ ನಮ್ಮ ಸುತ್ತ ಒಂದು ರೀತಿಯ ಕವಚ ನಿರ್ಮಾಣವಾಗುವುದರಿಂದ ನಮ್ಮ ಶರೀರ ವ್ಯವಸ್ಥೆ ಸಶಕ್ತಗೊಳ್ಳುತ್ತದೆ. ನಕಾರ ಚೈತನ್ಯಗಳು ಅವಾಗಿಯೇ ಪ್ರವೇಶಿಸುವುದಿಲ್ಲ, ಕೆಲವು ಸಲ ನಾವೇ ಅವುಗಳನ್ನು ಆಕರ್ಷಿಸುತ್ತೇವೆ. ನಾವು ಕೆಲವು ತಂತ್ರಗಳನ್ನು, ಅದರಲ್ಲಿಯೂ ಶಕ್ತಿಗಳನ್ನು ಪಡೆಯುವಂತಹ ತಂತ್ರಗಳನ್ನು ಅಭ್ಯಾಸ ಮಾಡಲು ಪ್ರಾರಂಭಿಸುವಾಗ ನಕಾರ ಚೈತನ್ಯಗಳು ನಮ್ಮೊಳಗೆ ನುಸುಳಿಬಿಡುತ್ತವೆ.

ಈ ಭೂಮಿಯ ಮೇಲೆ ಎರಡು ಗುಂಪುಗಳು – ಒಂದು ಬೆಳಕಿಗಾಗಿ, ಇನ್ನೊಂದು ಕತ್ತಲೆಗಾಗಿ ಕೆಲಸ ಮಾಡುತ್ತವೆ ಎಂಬುದನ್ನು ತಿಳಿಯಬೇಕು. ತಂತ್ರಗಳನ್ನು ಕೈಗೆತ್ತಿಕೊಳ್ಳುವಾಗ, ಸಂಪರ್ಕ ಸ್ಥಾಪಿಸುವ ವಿಷಯದಲ್ಲಿ ನಾವು ವಿಶೇಷವಾಗಿ ಜಾಗರೂಕರಾಗಿರಬೇಕು. ನಕಾರಾತ್ಮಕ ಆಲೋಚನೆಗಳು, ನಾವು ಅವುಗಳನ್ನು ಅನುಸರಿಸದ ಹೊರತು, ನಮ್ಮ ಸಾಧನೆಗೆ ಅಡಚಣೆ ಮಾಡುವುದಿಲ್ಲ, ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಸಾಮಾನ್ಯವಾಗಿ 'ಪ್ರಳಯ' ಪದ ಭಯಾನಕ, ಏಕೆಂದರೆ ಜನರು ಅದನ್ನು ವಿನಾಶವೆಂದು ತಿಳಿಯುತ್ತಾರೆ. ಪ್ರಳಯ ನಮ್ಮ ಜಾಗೃತಿಯನ್ನು ವಿಸ್ತರಿಸುತ್ತದೆ ಮತ್ತು ಅತ್ಯಾಶ್ಚರ್ಯಕರವಾಗಿ ವಿವೇಕವನ್ನು ನಮ್ಮಲ್ಲಿ ತರುತ್ತದೆ! ಯಾವ ಪ್ರಯತ್ನವಿಲ್ಲದೆ ನಾವು ಬದಲಾವಣೆಗಳನ್ನು ಮಾಡಿಕೊಳ್ಳುತ್ತೇವೆ. ನಾವು ಸಹಜವಾಗಿ ಪ್ರಶ್ನೆಗಳನ್ನು ಕೇಳುತ್ತೇವೆ ಮತ್ತು ನಾವು ಏಕೆ ಕಷ್ಟ ಪಡುತ್ತಿದ್ದೇವೆ ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತೇವೆ. ನಮ್ಮೊಳಗೆ ಮಂಥನದ ಕ್ರಿಯೆ

## ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

ಉಂಟಾಗುತ್ತದೆ. ಅದೊಂದು ಸವಾಲಿನ ಮತ್ತು ಒಂದು ಅತ್ಯಂತ ಸುಂದರವಾದ ಅವಧಿ. ಜೀವನಕ್ಕೆ ಸಂಬಂಧಿಸಿದಂತೆ ಕರ್ಮಗಳು ಮತ್ತು ಸಿದ್ಧಾಂತಗಳ ಬಗ್ಗೆ ತಿಳಿಯಲು ಪ್ರಯತ್ನಿಸುತ್ತೇವೆ. ಕರ್ಮಗಳ ಪ್ರಭಾವಗಳನ್ನು ತೊಡೆದು ಹಾಕಲು ನಾವು ಪ್ರಯತ್ನಿಸುತ್ತೇವೆ. ಬಹುಶಃ ಅದು ನಮ್ಮನ್ನು ಆಧ್ಯಾತ್ಮಿಕ ಅಭ್ಯಾಸಗಳು ಮತ್ತು ಧ್ಯಾನಗಳಿಗೆ ಕರೆತರುತ್ತದೆ. ಅದು ನಮ್ಮನ್ನು ದೇವರ ಬಳಿಗೆ ತರುತ್ತದೆ.

ಉನ್ನತ ನೆಲೆಯಿಂದ ಸಂದೇಶಗಳನ್ನು ಪಡೆಯುವಾಗ, ನೀವು ಅತ್ಯಂತ ಜಾಗರೂಕರಾಗಿರಬೇಕು. ಅನೇಕ ಸಲ ನಮ್ಮ ಮನಸ್ಸು ಅತ್ಯದ್ಭುತ ಸಂದೇಶಗಳನ್ನು ಕೊಡುತ್ತದೆ. ನಾವು ಅಂತರ್‌ಗ್ರಹಣ ಶಕ್ತಿ ಕೆಲಸ ಮಾಡಲು ಬಿಡಬೇಕು. ಸಂದೇಶವನ್ನು ಮತ್ತು ಅನುಭವವನ್ನು ಆನಂದಿಸಿ ಆದರೆ ಅದನ್ನು ಎಂದಿಗೂ ಅನುಸರಿಸಬೇಡಿ, ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ.

**02–03–2003**

ಒಮ್ಮೆ ನೀವು ಈ ಋಷಿಗಳ ಮಾರ್ಗದ ಧ್ಯಾನದಲ್ಲಿ ದೀಕ್ಷೆ ಪಡೆದುಕೊಂಡರೆ, ತನ್ನಷ್ಟಕ್ಕೆ ತಾನೇ ಹಿಮಾಲಯದಲ್ಲಿರುವ ಋಷಿಗಳ ಮುಖ್ಯಕೇಂದ್ರಕ್ಕೆ ಸಂಪರ್ಕಿತರಾಗುತ್ತೀರಿ. ನಿಮ್ಮ ಧ್ಯಾನಾಭ್ಯಾಸದ ಕಾಲ ಪೂರ್ತಿ ಒಬ್ಬ ಋಷಿ ನಿಮ್ಮ ಬಳಿ ಕುಳಿತಿರುತ್ತಾರೆ. ಅವರ ಉಪಸ್ಥಿತಿಯನ್ನು ನೀವು ಪರಿಭಾವಿಸಬಹುದು. ಅಭ್ಯಾಸಕ್ಕೆ ಸಂಬಂಧಿಸಿದಂತೆ ಸೂಚನೆಗಳು ಹೇಗೋ ನಿಮಗೆ ದೊರಕುತ್ತವೆ.

ಧ್ಯಾನಗಳನ್ನು ಮಾತ್ರವಲ್ಲ ನಮ್ಮನ್ನು ಮೇಲ್ವಿಚಾರಣೆ ಮಾಡುತ್ತ ಋಷಿಗಳು ಯಾವಾಗಲೂ ನಮ್ಮ ಸಂಪರ್ಕದಲ್ಲಿರುತ್ತಾರೆ. ನಮಗೆ ಸಮಸ್ಯೆಗಳಿದ್ದಾಗ, ಅವರು ಸಹಾಯ ಮಾಡುತ್ತಾರೆ, ನಮ್ಮನ್ನು ರಕ್ಷಿಸುತ್ತಾರೆ. ಅನಾಹುತಗಳಿಂದ ಪಾರುಮಾಡುತ್ತಾರೆ, ಕೆಲವು ಸಲ ಅಪಘಾತಗಳಿಂದ, ನಕಾರಾತ್ಮಕ ಜನರಿಂದ, ನಕಾರಾತ್ಮಕ ಶಕ್ತಿಗಳಿಂದ ರಕ್ಷಿಸುತ್ತಾರೆ.

ನಾವು ಅತ್ಯಂತ ಭಾವುಕರಾಗಿದ್ದರೆ ವಿಷಯಗಳನ್ನು ಸ್ಪಷ್ಟವಾಗಿ ಅರಿಯಲಾಗುವುದಿಲ್ಲ. ನಮ್ಮ ಭಾವನೆಗಳು ಮತ್ತು ಗ್ರಹಿಕೆಗಳು ಅಡಚಣೆಗಳಾಗುತ್ತವೆ. ಆದ್ದರಿಂದ ಪ್ರಪಂಚದೊಂದಿಗೆ ಮತ್ತು ಜನರೊಂದಿಗೆ ನಮ್ಮ ಪ್ರತಿಕ್ರಿಯೆ ಸರಿ ಇರುವುದಿಲ್ಲ. ಗೊಂದಲಗಳು, ಸಮಸ್ಯೆಗಳು ಮತ್ತು ವ್ಯತ್ಯಾಸಗಳು ಸಹಜವಾಗಿಯೇ ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯ ಮಾಡುವುದಿಲ್ಲ.

ಇದೇ ರೀತಿ ನಾವು ಅತ್ಯಂತ ಬುದ್ಧಿವಂತರಾದರೆ, ನಾವು ಎಲ್ಲವನ್ನು ಕಾರಣ, ತತ್ವಗಳ ಚೌಕಟ್ಟಿನಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೆ ನಾವು ಸತ್ಯದ ಮತ್ತು ವಾಸ್ತವೀಯತೆಯ ಸ್ವಲ್ಪ ಭಾಗ ಮಾತ್ರ ಅರಿಯುತ್ತೇವೆ. ಪುನಃ ಘರ್ಷಣೆಗಳು ಮತ್ತು ಗೊಂದಲಗಳು ಕಾಣಿಸಿಕೊಳ್ಳುತ್ತವೆ. ಆದರೆ ನಾವು ವಿಷಯಗಳನ್ನು ಆಧ್ಯಾತ್ಮಿಕವಾಗಿ ಮತ್ತು ಅಂತರ್‌ಗ್ರಹಣ ಶಕ್ತಿಯಿಂದ ಅರಿಯಲು ಪ್ರಯತ್ನಿಸಿದರೆ ಗೊಂದಲವಿರುವುದಿಲ್ಲ. ನಮ್ಮಲ್ಲಿ ಸ್ವಲ್ಪ ಭಾವೋದ್ವೇಗವಿರಬೇಕು ಮತ್ತು ನಮ್ಮ ಬುದ್ಧಿಯನ್ನು ಸಮತೋಲನದಲ್ಲಿ ಉಪಯೋಗಿಸಬೇಕು.

ಋಷಿಗಳಿಗಾಗಿ ಕೆಲಸಮಾಡಲು ನಾವು ಎಷ್ಟು ಸಿದ್ಧತೆ ಮಾಡಿಕೊಂಡರೂ ಸಾಲದು. ಇದು ಸಾಮಾನ್ಯವಾದ ಕೆಲಸವಲ್ಲ, ಆದ್ದರಿಂದ ನಾವು ಋಷಿಗಳ ಹಾಗೆ, ದೇವರ ಹಾಗೆ ಯೋಚಿಸಬೇಕು ಮತ್ತು ಭಾವನೆಗಳನ್ನು ಹೊಂದಿರಬೇಕು. ಇಡೀ ಪ್ರಪಂಚದೊಂದಿಗೆ ಸಾಮರಸ್ಯದಿಂದಿರಲು ನಮ್ಮ ಭಾವನೆಗಳು ಮತ್ತು ಆಲೋಚನೆಗಳನ್ನು ವಿಸ್ತರಿಸಬೇಕು. ನಾವು ಜ್ಞಾನವನ್ನು ಹಂಚಿಕೊಳ್ಳುವುದು ಮಾತ್ರವಲ್ಲ, ಅನೇಕ ವಿಷಯಗಳನ್ನು ಹಂಚಿಕೊಳ್ಳಲು ಸಿದ್ಧರಾಗಬೇಕು ಮತ್ತು ಅನೇಕ ವಿಷಯಗಳನ್ನು ಹೊಂದಿಸಿಕೊಳ್ಳಬೇಕು. ನಾವು ಮಹತ್ತರ ಪ್ರೀತಿಯನ್ನು ವ್ಯಕ್ತಪಡಿಸಬೇಕು. ಪ್ರೀತಿಯಿಲ್ಲದೆ ನಾವು ಯಾವ ಕೆಲಸವನ್ನೂ ಕೈಗೊಳ್ಳಲಾಗುವುದಿಲ್ಲ.

ಶಿವರಾತ್ರಿಯ ದಿನ ಋಷಿಗಳು ಶಿವನನ್ನು ಈ ಭೂಮಿಗೆ ಕರೆತರುತ್ತಾರೆ. ಶಿವನು ಈ ಭೂಮಿಯ ಮೇಲೆ ಹತ್ತು ದಿನಗಳವರೆಗೆ ಇರುತ್ತಾನೆ. ಈ ಪ್ರಪಂಚದಲ್ಲಿ ನಾವು ನಮ್ಮ ಬದುಕನ್ನು ಮುಂದುವರಿಸಬೇಕು, ಆದರೆ ನಮಗೆ ಆತನ ಉಪಸ್ಥಿತಿಯ ಅರಿವಿರಬೇಕು. ಸುಮ್ಮನೆ ಕುಳಿತು, ಅವನೊಂದಿಗೆ ಮಾತನಾಡಿ ಮತ್ತು ಅವನ ಅರಿವಿನಲ್ಲಿರಿ.

**09–03–2003**

ಕರ್ಮಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ ಎಂಬುದು ನಮಗೆಲ್ಲಾ ತಿಳಿದಿದೆ. ಒಳ್ಳೆಯ ಕರ್ಮಗಳು ಒಳ್ಳೆಯ ಭವಿಷ್ಯವನ್ನು ತರುತ್ತವೆ. ಕೆಟ್ಟ ಕರ್ಮಗಳು ಕಷ್ಟಗಳು, ನೋವುಗಳನ್ನು ತರುತ್ತವೆ. ನಾವು ಧ್ಯಾನ ಮಾಡಿದರೆ ಕೆಲವು ನಿರ್ದಿಷ್ಟ ಹಂತಗಳಲ್ಲಿ ನಮ್ಮ ಕರ್ಮಗಳು ಸುಟ್ಟು ಹೋಗುತ್ತವೆ. ಕಡಿಮೆ ಕರ್ಮಗಳು ಅಥವಾ ಕರ್ಮಗಳು ಇಲ್ಲವಾದರೆ ನಮ್ಮ ಭವಿಷ್ಯ ಬದಲಾಗುತ್ತದೆ. ನಮ್ಮ ಭವಿಷ್ಯವನ್ನು ನಾವೇ ಸೃಷ್ಟಿಸುತ್ತೇವೆ.

ನಾವು ಪ್ರಕೃತಿಗೆ ಏನು ಕೊಡುತ್ತೇವೋ ಅದರ ಅನೇಕ ಪಟ್ಟು ನಮಗೆ ಸಿಗುತ್ತವೆ ಎಂಬ ವಿಶೇಷ ನಿಯಮವಿದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ಭಾವನಾತ್ಮಕ ಮತ್ತು ಬೌದ್ಧಿಕ ಪ್ರತಿಕ್ರಿಯೆಗಳು ನಮಗೇ ಹಿಂದಿರುಗುವುದರಿಂದ, ನಾವು ಎಚ್ಚರಿಕೆಯಿಂದಿರಬೇಕು. ಆದ್ದರಿಂದ ಋಷಿಗಳು 'ನಮ್ಮ ಭವಿಷ್ಯವನ್ನು ನಾವೇ ಸೃಷ್ಟಿಸುತ್ತೇವೆ' ಎನ್ನುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ನಾವು ಪ್ರಾಮಾಣಿಕವಾಗಿ ಅಭ್ಯಾಸ ಮಾಡಬೇಕು, ಅದು ಧ್ಯಾನವಲ್ಲದೇ ಹೋದರೂ ಸರಿ, ಒಂದು ಮಂತ್ರದ ಪುನರುಚ್ಚಾರವಾಗಲಿ ಅಥವಾ ಪ್ರಾಣಾಯಾಮವಾಗಲಿ, ಒಂದು ಅಭ್ಯಾಸವನ್ನು ಕೈಗೊಳ್ಳಬೇಕು. ನಾವು ನಿಜವಾಗಿಯೂ ಅಭ್ಯಸಿಸಬೇಕು, ನಿಜವಾಗಿಯೂ ಧ್ಯಾನ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಬದಲಾವಣೆಗಳು ಕ್ರಮೇಣವಾಗಿ ಸದ್ದಿಲ್ಲದೆ ಆಗುತ್ತವೆ.

ಜ್ಞಾನ ಯೋಗವೆಂಬುದು ಒಂದು ಪರಿಚಿತವಾದ ಪದ. ಓದುವುದರಿಂದ ಅಥವಾ ಕೇಳುವುದರಿಂದ ಬುದ್ಧಿಯ ಮಟ್ಟದಲ್ಲಿ ಸಂಗ್ರಹಿಸಿದ ಜ್ಞಾನ ಇದಲ್ಲ, ಎಂದು ಋಷಿಗಳು ಹೇಳಿದ್ದಾರೆ. ಧ್ಯಾನಗಳಿಂದ, ನೇರ ಅನುಭವದಿಂದ, ಆತ್ಮವು ಈ ಜ್ಞಾನವನ್ನು ಗಳಿಸುತ್ತದೆ.

ಆಧ್ಯಾತ್ಮಿಕ ಪ್ರಯಾಣದಲ್ಲಿ ಎಲ್ಲ ರೀತಿಯ ಮೋಹಗಳಿಂದಾಚೆಗೆ ಹೋಗಬೇಕು – ಶಿವ, ಕೃಷ್ಣ ಇತ್ಯಾದಿ ದೇವರುಗಳ ಮೋಹದಿಂದಾಚೆ ಹೋಗಬೇಕು. ಮೋಹದ ಬಗ್ಗೆ ನನ್ನ ಗುರು ಬಹಳ ಸುಂದರವಾಗಿ ವಿವರಿಸಿದ್ದಾರೆ. ಅದು ನಮ್ಮ ಬೇಡಿಕೆಗಳನ್ನು ಆಧರಿಸಿದ ಸಂಬಂಧ, ನಮ್ಮ ಷರತ್ತುಗಳನ್ನು ಆಧರಿಸಿದ ಸಂಬಂಧ. ಸ್ವಾತಂತ್ರ್ಯವಿಲ್ಲದ, ಕೇವಲ ಬಂಧನಗಳಿರುವ ಸಂಬಂಧವದು.

ಕೆಲವೊಮ್ಮೆ ಜನರಲ್ಲಿ ಆಳವಾದ ಗೊಂದಲ ಮತ್ತು ಆತಂಕವನ್ನು ಕಂಡಿದ್ದೇನೆ. ಇದಕ್ಕೆ ಕಾರಣ ಅವರು ತಮ್ಮ ಗುರಿಗಳನ್ನು ಸ್ಪಷ್ಟವಾಗಿ ನಿರ್ಧರಿಸಿಕೊಂಡಿರುವುದಿಲ್ಲ. ನಾವು ಏನನ್ನು ಹುಡುಕುತ್ತಿದ್ದೇವೆ ಎಂಬುದು ನಮಗೆ ಚೆನ್ನಾಗಿ ತಿಳಿದಿರಬೇಕು. ಇಲ್ಲವಾದರೆ ನಮ್ಮ ಎಲ್ಲ ಹುಡುಕಾಟ ವ್ಯರ್ಥವಾಗುತ್ತದೆ. ನಾವು ಆಧ್ಯಾತ್ಮಿಕತೆಯನ್ನು ಆರಿಸಿಕೊಂಡಾಗ, ಪ್ರಾರಂಭದಲ್ಲಿ ಯಾವುದಾದರೊಂದು ಗುರಿ ಇರಬೇಕು, ಏಕೆಂದರೆ ಅದು ಸಮಯವನ್ನು ಉಳಿಸುತ್ತದೆ. ಗುರಿಗಳು ಬದಲಾಗುವುದಿಲ್ಲ, ಆದರೆ ವಿಸ್ತಾರವಾಗುತ್ತಿರುತ್ತವೆ.

ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಧ್ಯಾನವನ್ನು ಕೈಗೊಳ್ಳುವುದು ತಪ್ಪಲ್ಲ, ಆದರೆ ಅಲ್ಲಿಗೇ ಧ್ಯಾನವನ್ನು ನಿಲ್ಲಿಸಬಾರದು. ನಮ್ಮ ಸಮಸ್ಯೆಗಳು ಮಾಯವಾಗಬಹುದು, ಕೆಲವೊಮ್ಮೆ ಹಾಗೇ ಉಳಿಯಬಹುದು. ಆದರೂ ಸಹ, ಧ್ಯಾನ ಪ್ರಾರಂಭಿಸಿದ ನಂತರ, ಅದು ಹೇಗೋ ಮನದಾಳದಲ್ಲಿ, ಸಮಸ್ಯೆಗಳ ಪರಿಹಾರವೊಂದೇ ಅಲ್ಲದೆ ಇನ್ನೂ ಬೇರೆ ಗುರಿಗಳಿವೆ ಎಂಬುದನ್ನು ಮನಗಾಣುತ್ತೇವೆ.

ನೀವು ಪುಸ್ತಕಗಳನ್ನು ಓದುತ್ತಿಲ್ಲವಾದರೆ, ನೀವು ಓದಬೇಕೆನ್ನುವ ಸಲಹೆಯನ್ನು ನಾವು ನೀಡುತ್ತೇವೆ. ಓದುವುದು ಬಹಳ ಅಗತ್ಯ. ಓದದ ಹೊರತು ನಾವು ಜ್ಞಾನವನ್ನು ಸಂಗ್ರಹಿಸಲಾಗುವುದಿಲ್ಲ. ಓದಿದಾಗ, ನಾವು ಸತ್ಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೇವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

# ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ.ರಾವ್; ಅನು: ಸುಧಾಕರ್

ನಾವು 2012ರನ್ನು ದಾಟಿರುವುದು ನಿಜವಾದರೂ ಪ್ರಳಯದ ಕಾಲವನ್ನು ಇನ್ನೂ ಪೂರ್ತಿಯಾಗಿ ದಾಟಿಲ್ಲ. ಪ್ರಳಯ ಪ್ರಕ್ರಿಯೆಗಳು ಇನ್ನೂ ಹೆಚ್ಚು ಪ್ರಬಲಗೊಳ್ಳುತ್ತವೆ ಎಂದು ನಾವು ಗುರೂಜಿಯವರಿಂದ ತಿಳಿದುಕೊಂಡಿರುವುದರಿಂದ, 2012ಕ್ಕಾಗಿ ನಾವು ಮಾಡಿಕೊಂಡಿರುವ ಸಿದ್ಧತೆಗಳು ವ್ಯರ್ಥವಾಗುವುದಿಲ್ಲ. ನಾವು ಆ ನಮ್ಮ ಸಿದ್ಧತೆಯನ್ನು ನಿಲ್ಲಿಸದೆ ಮುಂದುವರೆಸಿಕೊಂಡು ಹೋಗಬೇಕು. ನಾವು ನಿರಾಶೆಗೊಂಡಿರಬಹುದು ಆದರೆ ಆಶಾಭಾವನೆಯನ್ನು ಬಿಡಬಾರದು. ಅನ್ಯಾಯಗಳ ವಿರುದ್ಧ ಹೆಚ್ಚುತ್ತಿರುವ ಕೋಪವನ್ನು ನಾವು ಗಮನಿಸಬೇಕು. ಇಂಥ ಕೋಪವನ್ನು ನಾವು ಹಿಂದೆಂದೂ ನೋಡಿರಲಿಲ್ಲ. ನಾವು ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ, ವೈಯಕ್ತಿಕವಾಗಿ ಬೆಳೆಯುವುದು ಮತ್ತು ಬೆಳಕನ್ನು ಹೆಚ್ಚು ಚಾನಲ್ ಮಾಡುವುದು. ಇದಕ್ಕೆ ಹೆಚ್ಚು ಜನರು ಸೇರಬೇಕು, ನಕಾರಾತ್ಮಕತೆ ನಿರ್ಮೂಲನವಾಗಲಿ ಎಂದು ಸಂಕಲ್ಪಿಸಬೇಕು. ಹಾಗೆಯೇ ಅವರು ತಮ್ಮೊಳಗಿನ ನಕಾರಾತ್ಮಕತೆಯನ್ನು ತೊಡೆದು ಹಾಕಬೇಕು. ಯಾವಾಗ ಹೆಚ್ಚು ಜನರು ಪ್ರೀತಿ ಮತ್ತು ಶಾಂತಿಯ ತರಂಗಗಳನ್ನು ಹೆಚ್ಚು ಹರಡುತ್ತಾರೋ, ಆಗ ಹಿಂಸೆ ಮತ್ತು ಭ್ರಷ್ಟಾಚಾರಗಳ ಹಿಂದಿರುವ ಶಕ್ತಿಗಳು ಹಿಂದೆ ಸರಿಯುತ್ತವೆ.

ಈ ಬಾರಿ ಶಂಬಲ ತರಗತಿಗಳಿಗೆ ಡಿಸೆಂಬರ್ 31ರೊಳಗೆ ನೋಂದಾಯಿಸಿಕೊಳ್ಳುವುದರಲ್ಲಿ ಅನೇಕರು ವಿಫಲರಾಗಿದ್ದಾರೆ. ಪ್ರತಿ ವರ್ಷವೂ ಈ ಗುಂಪಿನಲ್ಲಿರುವುದಕ್ಕೆ ಜನರು ಆಯ್ಕೆಮಾಡಿಕೊಳ್ಳಬೇಕು ಎಂಬುದು ಗುರೂಜಿಯವರ ಆಶಯವಾಗಿತ್ತು. ಆದರೆ ಅವರೇ ಹೇಳಿದ ಹಾಗೆ ನಾವು ಯಾವುದನ್ನೂ ಹೇರಬಾರದು, ಒಳ್ಳೆಯದನ್ನು ಕೂಡ.

ಪ್ರತಿಯೊಂದು ತರಗತಿಯಲ್ಲೂ ಮಾಸ್ಟರ್‌ಗಳು ಮತ್ತು ನೂರಾರು ಸೂಕ್ಷ್ಮದೇಹಿಗಳು ಇರುತ್ತಾರೆಂದು ಗುರೂಜಿಯವರು ಹೇಳಿದ್ದರು. ಹಳೆಯ ಡೈನಿಂಗ್ ಹಾಲ್‌ನಲ್ಲಿ ಕುಳಿತು ಭಾನುವಾರದ ತರಗತಿಯಲ್ಲಿ ಭಾಗವಹಿಸುವವರಲ್ಲಿ ಅನೇಕರು ತಮಗೆ ಮನಬಂದ ಸಮಯಕ್ಕೆ ಬರುವುದು ಮತ್ತು ಹೋಗುವುದನ್ನು ನಾವು ಇತ್ತೀಚೆಗೆ ಗಮನಿಸಿದ್ದೇವೆ. ಕೆಲವರು ಫೋನಿನಲ್ಲಿ ಕೂಡ ಮಾತನಾಡುತ್ತಾರೆ. ದಯವಿಟ್ಟು ಹೀಗೆ ಮಾಡಬೇಡಿ. ಇದು ಅಗೌರವವನ್ನು ಸೂಚಿಸುತ್ತದೆ.

ಈ ಪ್ರಳಯದ ಸಮಯಗಳಲ್ಲಿ ನಾವು ಅತಿ ವೇಗದಲ್ಲಿ ಆಧ್ಯಾತ್ಮಿಕವಾಗಿ ಬೆಳೆಯಬಹುದು ಎಂದು ಗುರೂಜಿಯವರು ಹೇಳಿದ್ದರು. ನಾವು ಬದಲಾದಾಗ ನಮ್ಮ ಸುತ್ತಲಿನ ಪ್ರಪಂಚವೂ ಬದಲಾಗುವುದು. ನಾವು ಋಷಿಗಳ ಅತ್ಯುತ್ತಮ ಚಾನಲ್‌ಗಳಾಗುತ್ತೇವೆ ಮತ್ತು ಅವರ ಕೆಲಸದಲ್ಲಿ ನಾವೂ ಭಾಗವಹಿಸುತ್ತೇವೆ. ಈ ಋಷಿ–ಮಾರ್ಗದಲ್ಲಿ, ಪ್ರತಿಯೊಬ್ಬರ ಸಾಧನೆಯನ್ನು ಈ ಮಟ್ಟದಲ್ಲಿ ಚೆಕಪ್‌ಗಳ ಮುಖಾಂತರವೂ ಮತ್ತು ಇನ್ನೊಂದು ಮಟ್ಟದಲ್ಲಿ ಋಷಿಗಳೂ ಮೇಲ್ವಿಚಾರಣೆ ಮಾಡುತ್ತಾರೆ. ಚೆಕಪ್ ನಡೆಯುತ್ತಿದ್ದಾಗ ನಮ್ಮ ಒಬ್ಬ ವಿದ್ಯಾರ್ಥಿಗೆ, ಅಲ್ಲಿ ಋಷಿಯೊಬ್ಬರಿರುವುದರ ಸ್ಪಷ್ಟ ಅನುಭವವಾಯಿತು. ಈ ರೀತಿಯ ಅನುಭವಗಳು, ಋಷಿಗಳು ನಮ್ಮನ್ನು ಮಾರ್ಗದರ್ಶಿಸುತ್ತಿರುವುದನ್ನು ದೃಢಪಡಿಸುತ್ತವೆ. ತಾವು ಹೆಚ್ಚು ಶಾಂತಿಯನ್ನು ಅನುಭವಿಸುತ್ತಿರುವುದಾಗಿ ಇತ್ತೀಚೆಗೆ ಜನರು ಹೇಳುತ್ತಿದ್ದಾರೆ. ಘರ್ಷಣೆಗಳು ಇಲ್ಲವಾಗಿವೆ. ಇದು ಗುರೂಜಿಯವರ ಕೃಪೆಯಿಂದ ಬಂದ ಕೊಡುಗೆ. ಅವರಿಂದ ಪಡೆದುದನ್ನು ನಾವು ಕಳೆದುಕೊಳ್ಳಬಾರದು, ಇದಕ್ಕಾಗಿ ನಾವು ಯಾವಾಗಲೂ ಬೆಳಕಿನೊಂದಿಗೆ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು.

'ಅವ್ಯಕ್ತ ಬ್ರಹ್ಮನಿಂದ ಮೊದಲಿಗೆ ಬೆಳಕು ಹೊರಬಂದಿತು ಮತ್ತು ಆ ಬೆಳಕಿನಿಂದ ಇಡೀ ಸೃಷ್ಟಿ ಹೊರಬಂದಿತು' ಎಂದು ಗುರೂಜಿಯವರು ವಿವರಿಸಿದ್ದಾರೆ. ಬ್ರಹ್ಮಾಂಡದಲ್ಲಿ ಗ್ಯಾಲಕ್ಸಿಗಳ ನಡುವೆ ದೇವರ ಅವ್ಯಕ್ತ ಭಾಗವಿದೆ. ಅಲ್ಲಿ, ಸುಪ್ತ ಸ್ಥಿತಿಯಲ್ಲಿರುವಂಥವುಗಳು ಅನೇಕ ಇವೆ. ನಮ್ಮೊಳಗೆ ಕೂಡ ಅವ್ಯಕ್ತ ಬ್ರಹ್ಮ ಇದ್ದಾನೆ. ಅದೇ 'ಚಿದಾಕಾಶ'. ಅದು ಆನಂದಮಯಕೋಶವನ್ನು ಸುತ್ತುವರೆದಿದೆ. ಈ ಚಿದಾಕಾಶವನ್ನು ಅನುಭವಿಸಬಹುದು, ಆದರೆ 3 ನಿಮಿಷಗಳಿಗಿಂತ ಹೆಚ್ಚು ಬೇಡ. ಈ ಅನುಭವ, ನಮಗೆ ಸಮಸ್ಥಿತಿಯಿಂದಿರಲು, ಸಮಚಿತ್ತದಿಂದಿರಲು ಮತ್ತು ಎಲ್ಲರೊಂದಿಗೆ ಸಮರ್ಪಕ ಸಂಬಂಧವನ್ನು ಏರ್ಪಡಿಸಿಕೊಳ್ಳಲು ಸಹಾಯಮಾಡುತ್ತದೆ.

ನಮ್ಮ ಸುತ್ತಲಿನ ಪ್ರಪಂಚದ ಅಪರಿಪೂರ್ಣತೆಯನ್ನು ಹಾಗೂ ನಮ್ಮದೇ ಸ್ವಂತ ಅಪರಿಪೂರ್ಣತೆಗಳನ್ನು ಕೂಡ ನಾವು ಒಪ್ಪಿಕೊಳ್ಳಬೇಕು. ಹಾಗೂ ಪರಿಪೂರ್ಣತೆಯತ್ತ ಸಾಗುವ ಪ್ರಯತ್ನವನ್ನು ಬಿಡದೆ ಮುಂದುವರೆಸಬೇಕು. ನಮ್ಮ ಮಟ್ಟವನ್ನು ಋಷಿಗಳು ಗಮನಿಸುವುದಿಲ್ಲ. ಆದರೆ ನಮ್ಮ ಬೆಳವಣಿಗೆಗಾಗಿ ನಾವು ಎಷ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂಬುದನ್ನು ಗಮನಿಸುತ್ತಾರೆ.

ಬೇರೆ ಲೇಖಕರ ಪುಸ್ತಕಗಳ ಮತ್ತು ಅಂತರ್‌ಜಾಲದ ಜ್ಞಾನಗಳಿಗೆ ನಾವು ತೆರೆದುಕೊಂಡಿರೋಣ. ಆದರೆ ಅಲ್ಲಿಂದ ತಂತ್ರಗಳನ್ನು ಆರಿಸಿಕೊಳ್ಳುವುದು ಬೇಡ.

ಫೆಬ್ರವರಿ 1, 1988ರಂದು ಗುರೂಜಿಯವರು ಆರು ಜನರೊಂದಿಗೆ ಗೊಲ್ಲಹಳ್ಳಿಯ ಗುಡಿಸಲಿನಲ್ಲಿ ಧ್ಯಾನಮಾಡಿದರು. ಆಗ ಮಾನಸ ಫೌಂಡೇಶನ್ ಜನ್ಮತಾಳಿತು. ಈ ರಜತ ಮಹೋತ್ಸವವನ್ನು ಹೆಮ್ಮೆಯಿಂದ ಆಚರಿಸಲಿದ್ದೇವೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ ರಾವ್; ಅನು: ಶ್ಯಾಮಲಾದೇವಿ)

**ಪ್ರ: ಗುಡುಗು ಮತ್ತು ಮಿಂಚುಗಳಿಂದ ವಿಶೇಷ ಚೈತನ್ಯಗಳನ್ನು ನಾವು ಪಡೆಯುತ್ತೇವೆಯೇ?**

ಉ: ಹೌದು. ಪ್ರಕೃತಿಯಲ್ಲಾಗುವ ಭೂಕಂಪ, ಸುನಾಮಿ, ಜ್ವಾಲಾಮುಖಿ ಸ್ಫೋಟ, ಇತ್ಯಾದಿ ಪ್ರತಿಯೊಂದು ಅಸಾಮಾನ್ಯ ಘಟನೆ ಯಾವಾಗಲೂ ಚೈತನ್ಯಗಳನ್ನು ತರುತ್ತದೆ. ಗುಡುಗು ಮತ್ತು ಮಿಂಚು ಕೂಡ ಸ್ಥೂಲದಿಂದ ಸೂಕ್ಷ್ಮದವರೆಗಿನ ಹಲವಾರು ವಿಧದ ಚೈತನ್ಯಗಳನ್ನು ತರುತ್ತವೆ. ಈ ಚೈತನ್ಯಗಳನ್ನು ಪ್ರಕೃತಿ, ಸಮುದ್ರಗಳು, ಸಾಗರಗಳು, ನದಿಗಳು, ಪ್ರಾಣಿಗಳು ಅಂತರ್ಗತ ಮಾಡಿಕೊಳ್ಳುತ್ತವೆ. ಧ್ಯಾನಿಗಳು ಗುಡುಗು ಮತ್ತು ಮಿಂಚುಗಳು ಉಂಟಾಗುವಾಗ ಅವರು ಧ್ಯಾನಮಾಡುತ್ತಿಲ್ಲದಿದ್ದರೂ ಕೂಡ ಅತಿಸೂಕ್ಷ್ಮ ಚೈತನ್ಯಗಳನ್ನು ಪಡೆದುಕೊಳ್ಳುತ್ತಾರೆ. ಈ ಚೈತನ್ಯಗಳು ಅನೇಕ ವಿಧಗಳಲ್ಲಿ, ಮುಖ್ಯವಾಗಿ ಶಾರೀರಿಕ–ವ್ಯವಸ್ಥೆಯನ್ನು ಶುದ್ಧೀಕರಿಸಲು ಮತ್ತು ಅದನ್ನು ಚೈತನ್ಯೀಕರಿಸಲು, ಸಹಾಯಮಾಡುತ್ತವೆ.

**ಪ್ರ: ಧ್ಯಾನದಲ್ಲಿ ಭೌತಶರೀರ ಎಷ್ಟರಮಟ್ಟಿಗೆ ಮುಖ್ಯ?**

ಉ: ಮನಸ್ಸು ಮತ್ತು ಬುದ್ಧಿಗಳಷ್ಟೇ ಮುಖ್ಯ. ವಾಸ್ತವದಲ್ಲಿ ಮೌನ ಭೌತಶರೀರದಿಂದ ಪ್ರಾರಂಭವಾಗುವುದು. ಆದ್ದರಿಂದ ಭೌತಶರೀರ ಬಹಳ ಮುಖ್ಯ.

**ಪ್ರ: ನಾವು ನಮ್ಮ ಸೂಕ್ಷ್ಮಶರೀರಗಳಲ್ಲಿ ಧ್ಯಾನಮಾಡಬಹುದೇ? ಅದಕ್ಕೆ ಅದೇ ತಂತ್ರವೇ ಸರಿಹೋಗುತ್ತದೆಯೇ?**

ಉ: ನಾವು ನಮ್ಮ ಸೂಕ್ಷ್ಮಶರೀರಗಳಲ್ಲಿ ಧ್ಯಾನಮಾಡಬಹುದು. ಅದೇ ತಂತ್ರವೇ ಸರಿಹೋಗುತ್ತದೆ.

**ಪ್ರ: ನಾವು ನಮ್ಮ ಸೂಕ್ಷ್ಮಶರೀರಗಳಲ್ಲಿ ಧ್ಯಾನಮಾಡಿದಾಗ ಕರ್ಮಗಳು ಕಳೆಯುತ್ತವೆಯೇ?**

ಉ: ನಾವು ಧ್ಯಾನ ಮಾಡಿದಾಗ ಕರ್ಮಗಳು ಕಳೆಯುತ್ತವೆ. ಸೂಕ್ಷ್ಮದೇಹದಲ್ಲಿ ಧ್ಯಾನಮಾಡುತ್ತೇವೋ ಅಥವಾ ಭೌತದೇಹದಲ್ಲಿ ಧ್ಯಾನಮಾಡುತ್ತೇವೋ ಎಂಬುದು ಮುಖ್ಯವಲ್ಲ.

**ಪ್ರ: ನಾವು ನಮ್ಮ ಸೂಕ್ಷ್ಮಶರೀರಗಳಲ್ಲಿ ಧ್ಯಾನಮಾಡಿದಾಗ ಋಷಿಗಳು ನಮ್ಮನ್ನು ಮಾರ್ಗದರ್ಶಿಸುತ್ತಾರೆಯೇ?**

ಉ: ವಿಷಯಗಳು ಸುಸ್ಪಷ್ಟವಾಗಿರಲಿ. ಅವರು ಖಂಡಿತ ಸಹಾಯಮಾಡುತ್ತಾರೆ. ಪ್ರತಿಯೊಂದು ಬಾರಿ, ಎಲ್ಲೇ ಆಗಲಿ ಅವರು ಸಹಾಯಮಾಡುತ್ತಾರೆ.

**ಪ್ರ: ನಾವು ನಮ್ಮ ಭೌತಶರೀರದಲ್ಲಿ ಧ್ಯಾನ ಮಾಡಿದಾಗಷ್ಟೇ ನಿವಾರಣೆಯಾಗುವ ಯಾವುದಾದರೂ ಕರ್ಮಗಳಿವೆಯೇ?**

ಉ: ಇಲ್ಲ, ಅಂಥ ಕರ್ಮಗಳಾವುವೂ ಇಲ್ಲ.

**ಪ್ರ: ಧ್ಯಾನ ಚೆನ್ನಾಗಿ ಆಗದಿರುವ ಅವಧಿಯನ್ನು ನಾವು ಹೇಗೆ ದಾಟಿಕೊಳ್ಳಬೇಕು?**

ಉ: ಕೆಲವು ಸಾರಿ ಧ್ಯಾನ ಚೆನ್ನಾಗಿ ಆಗುತ್ತದೆ, ಕೆಲವು ಸಾರಿ ಧ್ಯಾನ ಚೆನ್ನಾಗಿ ಆಗುವುದಿಲ್ಲ. ಇದನ್ನು ದಾಟಿಕೊಳ್ಳುವ ಕೆಲವು ಮಾರ್ಗಗಳಿವೆ. ಅದರಲ್ಲಿ ಒಂದು, ಅದರ ಬಗ್ಗೆ ಚಿಂತಿಸದಿರುವುದು. ಧ್ಯಾನ ಚೆನ್ನಾಗಿ ಆಗದಿರುವುದು ನಮ್ಮ ಹತೋಟಿಯಲ್ಲಿಲ್ಲ, ಅದು ಪ್ರಕೃತಿಯಲ್ಲಿದೆ. ಏರಿಳಿತಗಳು ಸ್ವಾಭಾವಿಕ. ನೀವೇನೂ ಮಾಡಬೇಕಾಗಿಲ್ಲ. ನಿಮ್ಮ ಅಭ್ಯಾಸಗಳನ್ನು ಮುಂದುವರೆಸಿ. ಸ್ವಲ್ಪ ಕಾಲದ ನಂತರ ನಿಮಗೆ ಪುನಃ ಧ್ಯಾನ ಚೆನ್ನಾಗಿ ಆಗುತ್ತದೆ. ಇನ್ನೊಂದು ಮಾರ್ಗವೆಂದರೆ, ಹೆಚ್ಚು ಪ್ರಯತ್ನ ಮಾಡುವುದು. ಆಗ ಎಲ್ಲ ಕಾಲದಲ್ಲೂ ಧ್ಯಾನ ಚೆನ್ನಾಗಿ ಆಗುತ್ತದೆ. ಮೂರನೆಯ ಮಾರ್ಗ, ನೀವು ಧ್ಯಾನ ಮಾಡದ ವೇಳೆಗಳಲ್ಲಿ ಬೆಳಕನ್ನು ಹೆಚ್ಚಾಗಿ ಅನುಭವಿಸುವುದು. ನಮ್ಮಲ್ಲಿ ಬಹಳಷ್ಟು ಜನ ಇದನ್ನು ಅಭ್ಯಾಸ ಮಾಡುತ್ತಿಲ್ಲ. ನಾವು ಲೈಟ್ ಚಾನಲ್ ಮಾಡುತ್ತೇವೆ ಮತ್ತು ನಮಗೆ ಏನಾದರೂ ಸಮಸ್ಯೆ ಇದ್ದಾಗ ಮಾತ್ರ ಬೆಳಕಿನ ಬಗ್ಗೆ ಯೋಚಿಸುತ್ತೇವೆ. ನೀವು ಯಾವಾಗಲೂ ಬೆಳಕನ್ನು ಹೊಂದಿರಬೇಕು. ಇದು ಸಾಧ್ಯವಿದೆ.

**ಪ್ರ: ನಮ್ಮ ಧ್ಯಾನದಲ್ಲಿ ವಿಧೇಯತೆ ಎಷ್ಟರಮಟ್ಟಿಗೆ ಸಹಾಯ ಮಾಡುತ್ತದೆ?**

ಉ: ವಿಧೇಯತೆ ಎಲ್ಲಕಡೆ ಸಹಾಯ ಮಾಡುತ್ತದೆ, ಧ್ಯಾನದಲ್ಲಷ್ಟೇ ಅಲ್ಲ. ನಿಮಗೆ ಧ್ಯಾನ ಮಾಡುವುದರಲ್ಲಿ ವಿಧೇಯತೆ ಇದ್ದರೆ ನಿಮ್ಮ ಆಧ್ಯಾತ್ಮಿಕ ಪ್ರಗತಿ ಶೀಘ್ರವಾಗಿ ಆಗುತ್ತದೆ.

**ಪ್ರ: ನನ್ನ ಸ್ನೇಹಿತನಿಗೆ ಬಹಳಷ್ಟು ಸಮಸ್ಯೆಗಳಿವೆ ಆದರೆ ಅವನು ಧ್ಯಾನವನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾನೆ. ನಾನು ಅವನಿಗೆ ಹೇಗೆ ಸಹಾಯ ಮಾಡಬಹುದು?**


ಉ: ನೀವು ಅವರಿಗೆ ಸಹಾಯ ಮಾಡಬೇಕೆಂದು ನಿಜವಾಗಿಯೂ ಬಯಸಿದ್ದಾದರೆ, ಅವರನ್ನು ಹಾಗೆಯೇ ಬಿಡಿ. ಪ್ರತಿಯೊಬ್ಬರೂ ಏನನ್ನಾದರೂ ಆಯ್ಕೆ ಮಾಡಿಕೊಂಡಾಗ, ತಾವು ತಮ್ಮ ಕಲಿಕೆಯ ಪ್ರಕ್ರಿಯೆಗಳ ಹಾದಿಯಲ್ಲಿ ಹೋಗಬೇಕು. ಆದ್ದರಿಂದ ನೀವು ಏನೂ ಮಾಡಲಾಗುವುದಿಲ್ಲ. ನೀವು ಅವರಿಗೆ ಬೆಳಕನ್ನು ಕಳುಹಿಸಬಹುದು, ಅದಕ್ಕಿಂತ ಹೆಚ್ಚಾಗಿ ಏನೂ ಮಾಡಲಾಗುವುದಿಲ್ಲ. ಆಧ್ಯಾತ್ಮಿಕ ನಿಯಮವೊಂದು ಹೀಗಿದೆ – ನೀವು ಯಾವುದನ್ನೇ ಆಗಲಿ ಬೇರೆಯವರ ಮೇಲೆ ಒತ್ತಾಯಪೂರ್ವಕವಾಗಿ ಹೇರಬಾರದು, ಒಳ್ಳೆಯವಿಷಯಗಳನ್ನೂ ಕೂಡ.

**ಪ್ರ: ಸಾವು ಪೂರ್ವ ನಿರ್ಧಾರಿತವಾದುದು. ಪ್ರಳಯದ ಅವಧಿಯಲ್ಲಿ ಸಾಯಬಹುದಾದ ಜನರ ಸಾವು ಕೂಡ ಪೂರ್ವ–ನಿರ್ಧಾರಿತವೇ?**

ಉ: ಪ್ರಳಯದ ಅವಧಿಯಲ್ಲಿ ಸಾಯಬಹುದಾದ ಜನರ ಸಾವು ಅವರ ಆಧ್ಯಾತ್ಮಿಕ ಕ್ರಿಯಾಶೀಲತೆ, ಆಧ್ಯಾತ್ಮಿಕ ಸ್ಥಿತಿ, ಆಧ್ಯಾತ್ಮಿಕ ಇಂಗಿತಗಳನ್ನು ಅವಲಂಬಿಸಿರುತ್ತದೆ. ಅಕಾಲ ಮರಣದ ಸಾಧ್ಯತೆ ಇದೆ. ಆದ್ದರಿಂದ ಅದು ನಿರ್ಧಾರವಾಗಿಲ್ಲ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |



**ಗುರೂಜಿ ಕೃಷ್ಣಾನಂದ (1939 - 2012)**

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯುಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8

# ಆಧ್ಯಾತ್ಮಿಕ ಅನುಭವಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಇತ್ತೀಚೆಗೆ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ನನ್ನ ಸಹೋದ್ಯೋಗಿಯೊಬ್ಬರೊಂದಿಗೆ ಒಂದು ಸಣ್ಣ ಜಗಳವಾಡಿದೆ. ಸಾಮಾನ್ಯವಾಗಿ ನಾನು ಯಾರಿಗೂ ನೋವನ್ನುಂಟುಮಾಡುವುದಿಲ್ಲ; ನಂತರ ನನಗೆ ಅವರ ಬಗ್ಗೆ ಕನಿಕರವುಂಟಾಯಿತು. ಅವರೂ ಅನೇಕ ತೊಂದರೆಗಳನ್ನು ಎದುರಿಸುತ್ತಿರುವ ವಿಷಯ ನನಗೆ ಗೊತ್ತು. ತಪ್ಪು ನಮ್ಮಿಬ್ಬರದೂ ಇದ್ದರೂ, ನಾನು ಅವರಲ್ಲಿ ಕ್ಷಮೆಯಾಚಿಸುವಲ್ಲಿ ಮತ್ತು ನನಗನಿಸಿದ್ದನ್ನು ಸ್ಪಷ್ಟವಾಗಿ ತಿಳಿಸುವಲ್ಲಿ ಸಫಲಳಾದೆ. ಈಗ ನನ್ನ ಗಮನವೆಲ್ಲಾ ಕೋಪವು ನನ್ನನ್ನು ಆವರಿಸುವ ಮೊದಲೇ ಅದರ ಅರಿವುಂಟಾಗುವ ಮೇಲಿನ ಹಂತಕ್ಕೆ ಹೋಗುವ ಕಡೆ ಕೇಂದ್ರೀಕೃತವಾಗಿದೆ.

– ಗೀತಾಂಜಲಿ ಬಾಲಕೃಷ್ಣ

ನಾನು ಧ್ಯಾನ ಮಾಡುತ್ತಿರುವ ಸಮಯದಲ್ಲೆಲ್ಲಾ ಮಹರ್ಷಿ ವಿಶ್ವಾಮಿತ್ರ, ಮಹರ್ಷಿ ಅಮರ ಮತ್ತು ಸಪ್ತಋಷಿಗಳ ಚೈತನ್ಯಗಳು ನನ್ನ ಸಮೀಪವಿದ್ದು, ನಾನು ಸದಾ ಅವರ ಪ್ರೀತಿಭರಿತ ವ್ಯಕ್ತಿತ್ವದಿಂದ ಆವೃತನಾದಂತೆನಿಸುತ್ತದೆ. ನನ್ನ ತಲೆಯ ಒಂದು ಅಗೋಚರ ಮುಚ್ಚಳವನ್ನು ತೆರೆಯುಲು ಪ್ರಯುತ್ನಿಸಿದಾಕ್ಷಣ, ಒಂದು ಅಗಾಧವಾದ ಬೆಳಕು ಹರಿದು ನನ್ನ ದೇಹವನ್ನು ತುಂಬುತ್ತದೆ. ಇದಕ್ಕಾಗಿ ನಾನು ಯಾವುದೇ ಹೆಚ್ಚಿನ ಪ್ರಯತ್ನವನ್ನೂ ಮಾಡಬೇಕಾಗಿಲ್ಲ. ನಾನು ಆ ಅಗಾಧವಾದ ಬೆಳಕನ್ನು ಮಾತ್ರ ಆನಂದಿಸಬೇಕು ಅಷ್ಟೆ.

– ಯಾಸುಜಿ ಯಮಗುಚಿ

ಕಡುಬೇಸಿಗೆಯ ಒಂದು ದಿನ, ನನ್ನ ಕೊಠಡಿಯಿಂದ ಮರಗಳನ್ನು ನೋಡುತ್ತಾ ತಂಗಾಳಿ ಏಕೆ ಬೀಸುತ್ತಿಲ್ಲ ಎಂದು ಯೋಚಿಸುತ್ತಿದ್ದೆ. ತಕ್ಷಣ ನಾನು ಆ ಮರಗಳೊಡನೆ ಸಂಪರ್ಕ ಹೊಂದಿದೆ; ತಂಗಾಳಿ ಬೀಸಲು ಪ್ರಾರಂಭಿಸಿತು! ಆಗ ಎಲ್ಲೆಡೆ ಬೆಳಕು ತುಂಬಿತು. ನಾನು ಒಂದು ಅತಿಸೂಕ್ಷ್ಮ ಕಣವಾಗಿ ಪರಿವರ್ತನೆಗೊಂಡು, ಆ ಸುಡುಬಿಸಿಲಿನ ಕಣದೊಂದಿಗೆ ಬೆರೆತೆ ಎಂದು ನಂತರ ನನಗೆ ಅರಿವಾಯಿತು. ಕೂಡಲೇ ಸುಡುತ್ತಿದ್ದ ಬಿಸಿಲು ತಂಪಾಯಿತು. ಆಗ ನಾನು ವಿಸ್ತರಿಸಲು ಪ್ರಾರಂಭಿಸಿದೆ ಮತ್ತು ಹೆಚ್ಚಿನ ಶಾಂತತೆಯನ್ನು ಬಹುಕಾಲ ಅನುಭವಿಸಿದೆ.

– ರಾಖೀ ಚೋಪ್ರಾ

ಇತ್ತೀಚಿನ ದಿನಗಳಲ್ಲಿ, ಹೆಚ್ಚಿನ ಸಮಯ ನಾನೊಂದು ನಿಶ್ಚಲತೆಯ ಸ್ಥಿತಿಯಲ್ಲಿರುತ್ತೇನೆ ಮತ್ತು ನನಗೆ ಪ್ರಶಾಂತತೆಯ ಅನುಭವವಾಗುತ್ತದೆ. ನಾನು ಆಂತರ್ಯದಲ್ಲಿ ಸಂಪೂರ್ಣ ಮೌನ ಮತ್ತು ವರ್ಣಿಸಲಾಗದ ಆನಂದವನ್ನು ಅನುಭವಿಸುತ್ತಿದ್ದೇನೆ. ನಾನು ಸಂಧಿಸುವ ಪ್ರತಿಯೊಬ್ಬರಿಂದಲೂ ಅವರ ಆತ್ಮದ ಮಟ್ಟದಿಂದ ಮುಗುಳ್ನಗೆಯನ್ನು ಪಡೆಯುತ್ತಿದ್ದೇನೆ.

– ಸಂಗೀತಾ ಪಾಟಿ



## ಫಾರಂ ೪ (ರೂಲ್ ೮)ರಂತೆ

ತಪೋವಾಣಿ ಕನ್ನಡ ವಾರ್ತಾಪತ್ರದ ಮಾಲೀಕತ್ವ ಮತ್ತು ಇತರ ವಿವರಗಳು

| | |
|---|---|
| 1. ಪತ್ರಿಕೆಯ ಹೆಸರು | ತಪೋವಾಣಿ |
| 2. ರಿಜಿಸ್ಟ್ರೇಷನ್ ನಂಬರ್ | KARKAN/2003/13739 |
| 3. ಪ್ರಕಟಣೆಯ ಸ್ಥಳ | ಬೆಂಗಳೂರು |
| 4. ಪ್ರಕಟಣೆಯ ಅವಧಿ | ತಿಂಗಳಿಗೊಮ್ಮೆ |
| 5. ಮುದ್ರಕರು, ಪ್ರಕಾಶಕರು ಮತ್ತು ಸಂಪಾದಕರ ಹೆಸರು | ಶ್ಯಾಮಲಾದೇವಿ |
| ರಾಷ್ಟ್ರೀಯತೆ | ಭಾರತೀಯರು |
| ವಿಳಾಸ | ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್– 560077 |
| 6. ಮುದ್ರಣವಾಗುವ ಸ್ಥಳ | ಆರ್ಟ್ ಪ್ರಿಂಟ್, 719/A, ಡಾ॥ ಮೋದಿ ಮುಖ್ಯರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು–86. |
| 7. ಮಾಲೀಕರ ಹೆಸರು | ಮಾನಸ ಫೌಂಡೇಶನ್(ರಿ) |

ನಾನು, ಶ್ಯಾಮಲಾದೇವಿ, ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ವಿವರಗಳು ನನ್ನ ತಿಳಿವಳಿಕೆ, ನನ್ನ ನಂಬಿಕೆ ಪ್ರಕಾರ ಸಂಪೂರ್ಣ ಸತ್ಯವಾಗಿವೆ.

ಸಹಿ
ಬೆಂಗಳೂರು ಶ್ಯಾಮಲಾದೇವಿ
ತಾ: 25–2–2013 ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ